ವಿಜಯಪುರ | ಸಂಪುಟ 01 | ಸಂಚಿಕೆ 242 | ಪುಟ 4 | ₹ 3.00

https://udayarashminews.com

udayarashmi 7026028778


# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com | Title Code: KARKAN28047 | ಶನಿವಾರ, ನವೆಂಬರ್ 18, 2023



“ವಿಜಯಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಶತಮಾನೋತ್ಸವ ಭವನ ಉದ್ಘಾಟನೆಗೆ ರಾಜ್ಯದ ಸಿಎಂ ಸಿದ್ಧರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ &ಗಣ್ಯರು ಭಾಗವಹಿಸಲಿದ್ದು, ಎಲ್ಲ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

– ಶಿವಾನಂದ ಪಾಟೀಲ

ಸಚಿವರು ಮತ್ತು ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷರು.

ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಘೋಷಣೆ । ಬೆಂಬಲಿಗರಿಂದ ಸಂಭ್ರಮಾಚರಣೆ । ಹಲ ನಾಯಕರ ಅಸಮಾಧಾನ

# ವಿಪಕ್ಷ ನಾಯಕರಾಗಿ ಬಿಜೆಪಿಯ ಆರ್.ಅಶೋಕ್!

ಬೆಂಗಳೂರು: ಬಿಜೆಪಿ ಹಿರಿಯ ನಾಯಕ ಆರ್ ಅಶೋಕ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ. ಬೆಂಗಳೂರಿನಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಘೋಷಣೆ ಮಾಡಿದರು.

ಕರ್ನಾಟಕ ವಿಧಾನಸಭೆ ನಡೆದ 6 ತಿಂಗಳ ಬಳಿಕ ಬಿಜೆಪಿ ಕೊನೆಗೂ ವಿಪಕ್ಷ ನಾಯಕನ ಹೆಸರು ಘೋಷಣೆ ಮಾಡಿದೆ. ಬಿವೈ ವಿಜಯೇಂದ್ರ ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಆಯ್ಕೆಯಾದ ಎರಡನೇ ದಿನದಲ್ಲೇ ಬಿಜೆಪಿ ವಿಪಕ್ಷ ನಾಯಕನ ಹೆಸರನ್ನೂ ಘೋಷಣೆ ಮಾಡಿದೆ.



ಆರ್. ಅಶೋಕ್ ಬೆಂಗಳೂ–ರಿನ ಪದ್ಮನಾಭನಗರ ಕ್ಷೇತ್ರದ ಶಾಸಕರಾಗಿದ್ದಾರೆ. ಒಕ್ಕಲಿಗ ಸಮುದಾಯದ ಪ್ರಭಾವಿ ನಾಯಕನಾಗಿರುವ ಅಶೋಕ ಅವರು ರಾಜ್ಯದ ಉಪ ಮುಖ್ಯಮಂತ್ರಿಯಾಗಿಯೂ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟದಲ್ಲಿ ಕಂದಾಯ ಸಚಿವರಾಗಿ ಕೆಲಸ ಮಾಡಿದ್ದಾರೆ.

## ಬೆಂಬಲಿಗರ ಸಂಭ್ರಮಾಚರಣೆ

ಆರ್. ಅಶೋಕ ಅವರನ್ನು ವಿಪಕ್ಷ ನಾಯಕರನ್ನಾಗಿ ಆಯ್ಕೆ ಮಾಡುತ್ತಿದ್ದಂತೆ ಬೆಂಬಲಿಗರು ಮತ್ತು ಅಭಿಮಾನಿಗಳು ಪಟಾಕಿ ಸಿಡಿಸುವ ಮೂಲಕ ಸಂಭ್ರಮಾಚರಣೆ ನಡೆಸಿದರು.

ವಿಪಕ್ಷ ನಾಯಕರಾಗಿ ಆಯ್ಕೆಯಾವ ಅಶೋಕ್ ಅವರನ್ನು ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಸೇರಿದಂತೆ ಹಲವು ಹಿರಿಯ ನಾಯಕರು ಅಭಿನಂದಿಸಿದರು.

ವಿಪಕ್ಷ ನಾಯಕನಾಗಿ ಆಯ್ಕೆಯಾದ ನಂತರ ಮಾತನಾಡಿದ ಆರ್. ಅಶೋಕ, “ ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ, ಪಕ್ಷ ಬಲಪಡಿಸಲು ಮುಂದಿನ ದಿನಗಳಲ್ಲಿ ಕೆಲಸ ಮಾಡುತ್ತೇನೆ. ನನಗೆ ಕೊಟ್ಟಿರುವ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ.” ಎಂದು ಹೇಳಿದ್ದಾರೆ.

## ಆರ್ ಅಶೋಕ್ ಮುಂದಿರುವ ಸವಾಲುಗಳು



ಬೆಂಗಳೂರು: ರಾಜ್ಯದಲ್ಲಿ ಬಿಜೆಪಿ ಪಕ್ಷದ ಹೀನಾಯ ಸೋಲು ಕಂಡಿರುವುದರಿಂದ ಬೂತ್ ಮಟ್ಟದಿಂದ ಪಕ್ಷವನ್ನು ಕಟ್ಟಬೇಕಿದೆ. ಅಸಮಾಧಾನಗೊಂಡಿರುವ ಹಿರಿಯ ಶಾಸಕರ ಮನವೊಲಿಸಬೇಕಿದೆ. ಲೋಕಸಭೆ ಚುನಾವಣೆ ಬಿಜೆಪಿಗೆ ದೊಡ್ಡ ಸವಾಲಾಗಿದ್ದು ಕಳೆದ ಬಾರಿ 28 ಕ್ಷೇತ್ರಗಳ ಪೈಕಿ 25 ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿತ್ತು. ಆದರೆ ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿರುವುದರಿಂದ ಅಷ್ಟೇ ಸ್ಥಾನಗಳನ್ನು ಉಳಿಸಿಕೊಳ್ಳುವುದು ದೊಡ್ಡ ಸವಾಲಾಗಿದೆ.

ವಿರೋಧ ಪಕ್ಷದ ನಾಯಕರ ಆಯ್ಕೆಗೆ ಸಭೆ ನಡೆಯುತ್ತಿರುವಾಗ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಟೀ ಕುಡಿಯುವುದಾಗಿ ಹೇಳಿ ಸಭೆಯಿಂದ ಹೊರನಡೆದಿದ್ದರು. ಇನ್ನು ವಿಜಯೇಂದ್ರ ಅವರನ್ನು ಪಕ್ಷದ ರಾಜ್ಯಾಧ್ಯಕ್ಷರನ್ನಾಗಿ ನೇಮಿಸಿದ್ದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಶಾಸಕರು, ಯಡಿಯೂರಪ್ಪ ಮತ್ತು ಅವರ ಕುಟುಂಬವನ್ನು ಉಲ್ಲೇಖಿಸಿ ಬಿಜೆಪಿ ಒಂದೇ ಕುಟುಂಬದ ಪಕ್ಷವಾಗಬಾರದು ಎಂದು ಹೇಳಿದರು.

ಕಳೆದ ವಾರ ಬಿಜೆಪಿ ಹೈಕಮಾಂಡ್ ಕರ್ನಾಟಕದ ರಾಜ್ಯಾಧ್ಯಕ್ಷರನ್ನಾಗಿ ಶಿಕಾರಿಪುರದ ಶಾಸಕ ಬಿ ವೈ ವಿಜಯೇಂದ್ರ ಅವರನ್ನು ನೇಮಕ ಮಾಡಿತು. ವಿಜಯೇಂದ್ರ ಬಿಜೆಪಿಯಲ್ಲಿ ಪ್ರಮುಖ ನಾಯಕನಾಗಿರುವ ಬಿ ಎಸ್ ಯಡಿಯೂರಪ್ಪ ಅವರ ಮಗ, ಬಿಎಸ್ವೈ ಕರ್ನಾಟಕದ ಮತ್ತೊಂದು ಪ್ರಬಲ ಲಿಂಗಾಯತ ಸಮುದಾಯದವರಾಗಿದ್ದಾರೆ.

224 ಸದಸ್ಯ ಬಲದ ವಿಧಾನಸಭೆಗೆ ಮೇ ತಿಂಗಳಿನಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸುವ ಮೂಲಕ ರಾಜ್ಯದಲ್ಲಿ ಸರ್ಕಾರ ನಡೆಸುತ್ತಿದೆ. ಕಾಂಗ್ರೆಸ್ 135, ಬಿಜೆಪಿ 66 ಮತ್ತು ಜೆಡಿಎಸ್ 19 ಸ್ಥಾನಗಳನ್ನು ಪಡೆದುಕೊಂಡಿತ್ತು.

ಲಿಂಗಾಯತ ಸಮುದಾಯದ ನಾಯಕ, ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರ ಪುತ್ರ ಬಿವೈ ವಿಜಯೇಂದ್ರ ಅವರನ್ನು ರಾಜ್ಯ ಬಿಜೆಪಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಮೂಲಕ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಲಿಂಗಾಯತರ ಮತಗಳನ್ನು ಸೆಳೆಯುವ ರಣತಂತ್ರವನ್ನು ಬಿಜೆಪಿ ಮಾಡಿತ್ತು.

ಈಗ ರಾಜ್ಯದ ಮತ್ತೊಂದು ಪ್ರಬಲ ಸಮುದಾಯವಾದ ಒಕ್ಕಲಿಗರ ಮತಗಳನ್ನು ಸೆಳೆಯಲು ಆರ್. ಅಶೋಕ ಅವರನ್ನು ವಿಪಕ್ಷ ನಾಯಕರನ್ನಾಗಿ ಬಿಜೆಪಿ ಹೈಕಮಾಂಡ್ ಆಯ್ಕೆ ಮಾಡಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ವಿಪಕ್ಷ ನಾಯಕನ ಆಯ್ಕೆ ಬೆನ್ನಲ್ಲೇ ಬಿಜೆಪಿಯಲ್ಲಿ ಅಸಮಾಧಾನ ಹೆಚ್ಚಾಗುವ ಸಾಧ್ಯತೆ ಇದೆ. ಬಸನಗೌಡ ಪಾಟೀಲ್ ಯತ್ನಾಳ್, ಅರವಿಂದ ಬೆಲ್ಲದ್ ಸೇರಿದಂತೆ ಹಲವು ನಾಯಕರು ಅಸಮಾಧಾನಗೊಂಡಿದ್ದು, ಈ ನಾಯಕರನ್ನು ಹೇಗೆ ಸಮಾಧಾನ ಪಡಿಸುತ್ತಾರೆ ನೋಡಬೇಕಿದೆ.

# ಜನರಿಗೆ ಕಾಂಗ್ರೆಸ್ ಮೋಸದ ಬಗ್ಗೆ ಅರಿವಾಗಿದೆ :ಬಿ.ಶ್ರೀರಾಮಲು

ಉದಯರಶ್ಮಿ ನ್ಯೂಸ್



ವಿಜಯಪುರ: ಬರುವ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಡಬಲ್ ಡಿಜಿಟ್ ಸಹ ಕ್ರಾಸ್ ಮಾಡುವುದಿಲ್ಲ. ಒಂದಿಬ್ಬರು ಆಯ್ಕೆಯಾಗಬಹುದು ಅಷ್ಟೇ. ಜನರಿಗೆ ಕಾಂಗ್ರೆಸ್ ಪಕ್ಷದ ಮೇಲೆ ವಿಶ್ವಾಸ ಸಂಪೂರ್ಣ ಕಡಿಮೆಯಾಗಿದೆ ಎಂದು ಮಾಜಿ ಸಚಿವ ಬಿ. ಶ್ರೀರಾಮಲು ಭವಿಷ್ಯ ನುಡಿದರು.

ನಗರದ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ನಡೆದ ವಿಜಯಪುರ ಕಾರ್ಯಕರ್ತರೊಡನೆ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆ ಸಮೀಪಿಸುತ್ತಿದೆ. ಜನರಿಗೆ ಕಾಂಗ್ರೆಸ್ ಮೋಸದ ಬಗ್ಗೆ ಅರಿವಾಗಿದೆ ಎಂದರು.

ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯಭೇರಿ ಬಾರಿಸುವ ನಿಟ್ಟಿನಲ್ಲಿ ಬಿಜೆಪಿ ಕಾರ್ಯಕರ್ತರು ಧೃಡಸಂಕಲ್ಪ ಮಾಡಬೇಕು, ಇದು ಕೇವಲ ಒಬ್ಬರಿಂದ ಆಗುವ ಕೆಲಸವಲ್ಲ, ಇದೊಂದು ಸಾಮೂಹಿಕ ಪ್ರಯತ್ನ, ಎಲ್ಲ ಕಾರ್ಯಕರ್ತರು ಹೊಸ ಹುಮ್ಮಸ್ಸಿನಿಂದ ದುಡಿಯಬೇಕು. ಕರ್ನಾಟಕ ರಾಜ್ಯದಿಂದ ಹೆಚ್ಚಿನ ಸಂಸದರನ್ನು ಆಯ್ಕೆ ಮಾಡಿ ಕಳುಹಿಸುವ ಮೂಲಕ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸಬೇಕು ಎಂದು ಕರೆ ನೀಡಿದರು.


ಪ್ರಸ್ತುತ ಸಂಸದರಾಗಿರುವ ರಮೇಶ ಜಿಗಜಿಣಗಿ ಅವರು ಸಹ ಹಿರಿಯ ರಾಜಕೀಯ ಧುರೀಣರು, ಲಕ್ಷಾಂತರ ಕಾರ್ಯಕರ್ತರ ಪ್ರೀತಿಯನ್ನು ಸಂಪಾದಿಸಿದ್ದಾರೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಎಸ್. ಪಾಟೀಲ ಕುಚಬಾಳ, ಲಿಂಬೆ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಚಂದ್ರಶೇಖರ ಕವಟಗಿ, ವಿಭಾಗೀಯ ಸಂಘಟನಾ ಮಹಾಮಂತ್ರಿ ಪ್ರಕಾಶ ಅಕ್ಕಲಕೋಟ, ನಗರ ಮಂಡಳ ಅಧ್ಯಕ್ಷ ಮಳುಗೌಡ ಪಾಟೀಲ, ಮುಖಂಡರಾದ ವಿವೇಕಾನಂದ ಡಬ್ಬಿ, ಮಲ್ಲಿಕಾರ್ಜುನ ಜೋಗೂರ, ಬಸರಾಜ ಬಿರಾದಾರ, ಸಂಜು ಐಹೊಳಿ, ಶಿವರುದ್ರ ಬಾಗಲಕೋಟ, ಬಿಜೆಪಿ ಮಹಾನಗರ ಪಾಲಿಕೆ ಸದಸ್ಯರು, ಮಹಿಳಾ ಮೋರ್ಚಾ ಸೇರಿದಂತೆ ವಿವಿಧ ಮಂಡಳಗಳ ಪದಾಧಿಕಾರಿಗಳು, ಕಾರ್ಯಕರ್ತರು ಈ ಸಂದರ್ಭದಲ್ಲಿ ಪಾಲ್ಗೊಂಡಿದ್ದರು.

## ರಾಜ ನುಡಿ

ಹೊಟ್ಟೆ ಖಾಲಿ ಇದ್ದಾಗ ನಮಗೆ ಎಚ್ಚರಿಸುತ್ತೆ ಆದರೆ ಮೆದುಳು ಖಾಲಿ ಇದ್ದಾಗ ನಮ್ಮನ್ನು ಎಚ್ಚರಿಸುವುದಿಲ್ಲ. ನಾವೇ ಎಚ್ಚರಗೊಂಡು ಅದನ್ನು ಭರ್ತಿಮಾಡಬೇಕು. ತುಂಬಿದ ಒಂದು ಮೆದುಳು ನೂರಾರು ಹೊಟ್ಟೆಗಳನ್ನು ತುಂಬಿಸಬಲ್ಲದು. ವೈಚಾ–ರಿಕತೆ ಬೆಳೆಯಲಿ.

–ಡಾ. ರಾಜಶೇಖರ ನಾಗೂರ



## ವಚನ ಚಿಂತನ 236

ಇಷ್ಟಲಿಂಗ ಯೋಗ

*ಅಷ್ಟದಳದ ಮೇಲೆ ನಲಿದಾಡುವ ಹಂಸನ*
*ಜ್ಞಾನದೃಷ್ಟಿಯ ಮೇಲೆ ನಿಲಿಸಿ,*
*ಬಟ್ಟಬಯಲ ನೋಡಿ ದೃಷ್ಟನಾದನಯ್ಯ*
*ನಿಮ್ಮ ಶರಣನುರ್ಘೇಂಕಾರ ನಿಜಲಿಂಗಪ್ರಭುವೆ.*
*– ಜಕ್ಕಣ್ಣಯ್ಯನವರು*

ಶರಣರು ಗಳಿಸಿದ ಆಧ್ಯಾತ್ಮಿಕ ಜ್ಞಾನದ ಮೂಲ ಯಾವುದೆಂದರೆ, ಅವರು ಪ್ರತಿದಿನ ಕೈಗೊಳ್ಳುವ ಇಷ್ಟಲಿಂಗ ಯೋಗ. ಇದರ ಮೂಲಕ ಅಂತರಂಗದಲ್ಲಾಗುವ ಅನುಭಾವದ ಬೆಳವಣಿಗೆಯನ್ನು ಜಕ್ಕಣ್ಣಯ್ಯನವರು ಈ ವಚನದಲ್ಲಿ ವಿವರಿಸಿದ್ದಾರೆ. ಇಷ್ಟಲಿಂಗದ ಮೇಲೆ ದೃಷ್ಟಿ ನೆಲೆಗೊಳ್ಳುವ ಮೂಲಕ ಅದರಿಂದ ಹೊರಹೊಮ್ಮಿದ ಚೈತನ್ಯ ಶಕ್ತಿಯು ಅಂಗದ ಕಂಗಳ ಮೂಲಕ ಸಾಧಕನ ಅಂಗದ ಪ್ರವೇಶದಿಂದ ಅಂಗದೊಳಗಿನ ಅಗೋಚರ ಚಕ್ರಗಳ ಪದ್ಮಗಳು ಜಾಗೃತಗೊಳ್ಳುತ್ತವೆ. ಮೂಲಾಧರ ಚಕ್ರದಿಂದ ಆಜ್ಞಾಚಕ್ರದಾಚೆಗಿನ ಪಶ್ಚಿಮ ಚಕ್ರದಲ್ಲಿ ಮನ ನೆಲೆಗೊಂಡಾಗ ಉಂಟಾಗುವ ಅನುಭಾವವನ್ನು ಅಷ್ಟದಳದ ಮೇಲೆ ನಲಿದಾಡುವ ಹಂಸ ಎಂದಿರುವರು. ಜ್ಞಾನದ ದೃಷ್ಟಿಯಿಂದ ನೋಡಲಾಗಿ ಅಲ್ಲಿ ಬಯಲರೂಪದಲ್ಲಿ ದೃಷ್ಟನಷ್ಟವಾಗಿ ಅನುಭಾವದ ಉನ್ನತ ಸ್ಥಿತಿಯು ಅನುಭವಕ್ಕೆ ಬರುತ್ತದೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

# ನ.21 ರಂದು ವಿಕಲಚೇತನರ ಕ್ರೀಡಾಕೂಟ

ವಿಜಯಪುರ: ಜಿಲ್ಲೆಯಾದ್ಯಂತ ವಿಕಲಚೇತನರ ತಾಲೂಕಾ ಮಟ್ಟದ ಕ್ರೀಡಾಕೂಟವನ್ನು ಇದೇ ನವೆಂಬರ್ 21 ರಂದು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಜಯಪುರ ತಾಲೂಕಿನ ಕ್ರೀಡಾಕೂಟವನ್ನು ನಗರದ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ, ಇಂಡಿ ತಾಲೂಕಿನ ಕ್ರೀಡಾಕೂಟವನ್ನು ಇಂಡಿ ತಾಲೂಕಾ ಕ್ರೀಡಾಂಗಣದಲ್ಲಿ, ಸಿಂದಗಿ ತಾಲೂಕಾ ಕ್ರೀಡಾಕೂಟ ಸಿಂದಗಿ ತಾಲೂಕಾ ಕ್ರೀಡಾಂಗಣದಲ್ಲಿ, ಬಸವನಬಾಗೇವಾಡಿ ತಾಲೂಕಿನ ಕ್ರೀಡಾಕೂಟ ಬಾಗೇವಾಡಿಯ ಬಸವೇಶ್ವರ ಕಾಲೇಜ್ ಮೈದಾನದಲ್ಲಿ ಹಾಗೂ ಮುದ್ದೇಬಿಹಾಳ ತಾಲೂಕಿನ ಕ್ರೀಡಾಕೂಟವನ್ನು ಮುದ್ದೇಬಿಹಾಳದ ವ್ಹಿ.ಬಿ.ಸಿ. ಮೈದಾನದಲ್ಲಿ ಆಯೋಜಿಸಲಾಗಿದೆ.

ವಿಜಯಪುರ ತಾಲೂಕಿಗೆ ಸಂಬಂಧಿಸಿದಂತೆ ರಾಜು ಚವ್ಹಾಣ ಮೊ:7019167243, ಇಂಡಿ ತಾಲೂಕಿಗೆ ಎ.ಎಸ್.ಲಾಳಶೇರಿ ಮೊ: 9148869100, ಇಂಡಿ ತಾಲೂಕಿಗೆ ಆರ್.ಆರ್.ರಾಠೋಡ ಮೊ: 8310743175, ಬಸವನಬಾಗೇವಾಡಿ ತಾಲೂಕಿಗೆ ಎಸ್.ಎಸ್.ಅವಟಿ ಮೊ: 9663297654 ಹಾಗೂ ಮುದ್ದೇಬಿಹಾಳ ತಾಲೂಕಿಗೆ ಸಂಬಂಧಿಸಿದಂತೆ ಬಿ.ವಾಯ್. ಕವಡಿ ಮೊ: 7026369805 ಅಧಿಕಾ–ರಿಗಳನ್ನು ನೇಮಿಸಲಾಗಿದೆ.


ಕ್ರೀಡಾಕೂಟದಲ್ಲಿ 18 ವರ್ಷ ವಯೋಮಿತಿ ಒಳಗಿನ/ಮೇಲ್ಪಟ್ಟ ಪುರುಷ, ಮಹಿಳೆಯರಿಗೆ ರನ್ನಿಂಗ್ (ಸಿಂಗಲ್ ಲೆಗ್, ಬಗಲು ಬಡಿಗೆ, ವ್ಹಿಲ್ ಚೇರ್), ಗುಂಡು ಎಸೆತ, ಚಕ್ರ ಎಸೆತ, ಜಾವಲಿನ ಥ್ರೋ, ಕೇರಂ ಚೆಸ್ ಸ್ಪರ್ಧೆಗಳನ್ನು ಆಯೋಜಿಸಲಾಗುವುದು ಆಯಾ ತಾಲೂಕಿನ ಸ್ಪರ್ಧಿಗಳು ಅಂದು ಬೆಳಿಗ್ಗೆ 9 ಗಂಟೆಗೆ ವರದಿ ಮಾಡಿಕೊಳ್ಳಬೇಕು.

ತಾಲೂಕಾ ಮಟ್ಟದ ವಿಶೇಷ ಚೇತನ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತರಾದ ಸ್ಪರ್ಧಿಗಳು ದಿನಾಂಕ : 27–11–2023 ರಂದು ವಿಜಯಪುರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜರುಗುವ ಜಿಲ್ಲಾ ಮಟ್ಟದ ವಿಶೇಷ ಚೇತನ ಕ್ರೀಡಾಕೂಟದಲ್ಲಿ ಭಾಗವಹಿಸಲು ಅರ್ಹತೆ ಪಡೆಯುತ್ತಾರೆ ಹಾಗೂ ಅದೇ ದಿನ ಮಧ್ಯಾಹ್ನ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಲಾಗುವುದು. ಜಿಲ್ಲೆಯ ವಿಶೇಷ ಚೇತನ ಪುರುಷ–ಮಹಿಳಾ ಸ್ಪರ್ಧಿಗಳು ಆಸಕ್ತಿಯಿಂದ ಭಾಗವಹಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸುವಂತೆ ಕೋರಲಾಗಿದ್ದು, ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ದೂ: 08352–251085, ಮೊ: 9480886555 ಸಂಖ್ಯೆಗೆ ಸಂಪರ್ಕಿಸುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂತರವಲಯ ಮಟ್ಟದ ಪುರುಷ ಹಾಗೂ ಮಹಿಳೆಯರ ಕುಸ್ತಿ ಪಂದ್ಯಾವಳಿ ಉದ್ಘಾಟನೆ

# ರೂ.2 ಕೋಟಿ ವೆಚ್ಚದ ಗರಡಿಮನೆ ನಿರ್ಮಾಣದ ಕನಸು :ಶಾಸಕ ಮನಗೂಳಿ

ಉದಯರಶ್ಮಿ ನ್ಯೂಸ್




ಸಿಂದಗಿ: ಕುಸ್ತಿ ಒಂದು ಗ್ರಾಮೀಣ ಭಾಗದ ಕ್ರೀಡೆಯಾದರೂ ಅದು ಇಂದು ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಖ್ಯಾತಿಯನ್ನು ಪಡೆದುಕೊಂಡಿದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಅವರು ಪಟ್ಟಣದ ಮಾಂಗಲ್ಯ ಭವನದಲ್ಲಿ ಶುಕ್ರವಾರ ಸಿಎಂ ಮನಗೂಳಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ ಹಾಗೂ ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಹಮ್ಮಿಕೊಂಡಿರುವ ಏಕದಿನದ ಅಂತರವಲಯ ಮಟ್ಟದ ಪುರುಷ ಹಾಗೂ ಮಹಿಳೆಯರ ಕುಸ್ತಿ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದರು.

ಸಿಂದಗಿ ನಗರ ಸಾಂಸ್ಕೃತಿಕ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಹೆಚ್ಚು ಹೆಸರನ್ನು ಪಡೆದ ಕ್ಷೇತ್ರವಾಗಿದೆ. ವಿಶ್ವವಿದ್ಯಾಲಯ ಇಲ್ಲಿ ರಾಷ್ಟ್ರಮಟ್ಟದ ಯಾವುದೇ ಕ್ರೀಡೆಗಳನ್ನು ಹಮ್ಮಿಕೊಂಡರೂ ನಾನು ಅದಕ್ಕೆ ತನು–ಮನದಿಂದ ಸೇವೆ ಮಾಡಲು ಸಿದ್ಧನಾಗಿದ್ದೇನೆ ಎಂದರು.

ಗ್ರಾಮೀಣ ಭಾಗದ ಕ್ರೀಡೆಗಳು ನಶಿಸಿ ಹೋಗಬಾರದು. ಪಾರಂಪರಿಕವಾಗಿ ಅವೆಲ್ಲ ಮುಂದುವರೆಸಿಕೊಂಡು ಹೋಗಬೇಕು. ಆ ನಿಟ್ಟಿನಲ್ಲಿ ಸಿಂದಗಿಯಲ್ಲಿ ಗರಡಿಮನೆ ನಿರ್ಮಾಣ–ಕ್ಕಾಗಿ ಅಂದಾಜು 2 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡುವ ಕನಸನ್ನ ಹೊತ್ತು ಕೊಂಡಿದ್ದೇನೆ. ಈಗಾಗಲೇ ಆ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ ಎಂದು ಹೇಳಿದರು.

ಈ ವೇಳೆ ತಾಲೂಕ ಶಿಕ್ಷಣ ಪ್ರಸಾರಕ ಮಂಡಳಿಯ ನಿರ್ದೇಶಕ ಶಿವಪ್ಪ ಗೌಡ ಬಿರಾದಾರ ಮಾತನಾಡಿ, ಕುಸ್ತಿ ಆಟ ಸಂಸ್ಕೃತಿಯನ್ನು ತೋ–ರಿಸುವ ಉತ್ತಮ ಆಟವಾಗಿದೆ. ಇಂದಿನ ವೈಜ್ಞಾನಿಕ ಜಗತ್ತಿನಲ್ಲಿ ಗ್ರಾಮೀಣ ಕ್ರೀಡೆಗಳಿಗೆ ಹೆಚ್ಚು ಒತ್ತು ಕೊಡುತ್ತಿರುವುದು ಶ್ಲಾಘನೀಯ ಎಂದರು.

ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕ್ರೀಡಾ ನಿರ್ದೇಶಕ ಜಗದೀಶ್ ಗಸ್ತಿ, ಜಿ.ಪಿ. ಪೋರವಾಲ ಕಲಾ ಮಹಾವಿದ್ಯಾಲಯದ ದೈಹಿಕ ನಿರ್ದೇಶಕ ರವಿ ಗೋಲಾ ಪ್ರಾಸ್ತಾವಿಕವಾಗಿ ಮಾತನಾಡಿದರು.

ಬೀದರ್ ಕಾಲೇಜಿನ ಪ್ರಾಚಾರ್ಯ ಅಶೋಕ ಬೂದಿಹಾಳ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಣ ದೈಹಿಕ ನಿರ್ದೇಶಕರಾದ ಕೆ. ಎಚ್. ಸೋಮಪುರ್, ಎಚ್.ಎಂ. ಉತ್ನಾಳ, ಶಂಕರಲಿಂಗ ಚೌಧರಿ, ಕಲಕೇರಿ ಬಸವೇಶ್ವರ ಪದವಿಪೂರ್ವ ಮಹಾ ವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕ ಶಾಂತೇಶ್ ದುರ್ಗಿ, ಎಸ್.ಎ. ಜಾಗೀರದಾರ, ಪ್ರಾಚಾರ್ಯ ಡಾ. ಬಿ.ಜಿ ಪಾಟೀಲ್, ಡಾ. ಅಂಬರೀಶ ಬಿರಾದಾರ ವೇದಿಕೆಯ ಮೇಲಿದ್ದರು.

ಕಾರ್ಯಕ್ರಮದಲ್ಲಿ ಡಾ. ಅರವಿಂದ ಮನಗೂಳಿ, ಎಸ್ ಎಸ್ ಮಲ್ಲೇದ, ಸಂಗು ಬಿರಾದಾರ, ಗವಿಸಿದ್ದಪ್ಪ ಆನೆಗುಂದಿ, ಮಂಜುನಾಥ್ ತಳವಾರ್, ಮಂಜುನಾಥ್ ಕುಂಬಾರ್, ಸುಭಾಷ್ ಪಾಟೀಲ, ಸಿದ್ದಲಿಂಗ ಚೌಧರಿ, ಪ್ರವೀಣ ಬಿರಾದಾರ, ಆನಂದ್ ಅಂಬಲಗಿ, ರಮೇಶ್ ಬಿರಾದಾರ, ಎಂ. ಕೆ. ಬಿರಾದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಶ್ರೀಶೈಲ ಜಮಾದಾರ ಪ್ರಾರ್ಥಿಸಿದರು, ಉಪನ್ಯಾಸಕ ಸಿದ್ದಲಿಂಗ ಕಿಣಗಿ ನಿರೂಪಿಸಿದರು, ಪ್ರಾಚಾರ್ಯ ಡಾ. ಬಿ. ಜಿ. ಪಾಟೀಲ ಸ್ವಾಗತಿಸಿದರು, ಡಾ. ಅಂಬರೀಶ ಬಿರಾದಾರ ವಂದಿಸಿದರು.

### ವಿಜಯಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಶತಮಾನೋತ್ಸವ ಭವನ ಉದ್ಘಾಟನೆ । ಸಚಿವ ಶಿವಾನಂದ ಪಾಟೀಲ ಸುದ್ದಿಗೋಷ್ಠಿ

# ನ.20ರಂದು ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ

ಉದಯರಶ್ಮಿ ನ್ಯೂಸ್

ವಿಜಯಪುರ: ಅಖಿಲ ಭಾರತ ಸಹಕಾರ ಸಪ್ತಾಹದ 70ನೇ ಸಮಾರೋಪ ಸಮಾರಂಭ ಹಾಗೂ ವಿಜಯಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಶತಮಾನೋತ್ಸವ ಭವನ ಉದ್ಘಾಟನೆಗೆ ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮತ್ತು ಸಹಕಾರ ಸಚಿವರು ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದು, ಸಮಾರಂಭದ ಎಲ್ಲ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷರೂ ಆದ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಅವರು ಹೇಳಿದರು.



ನಗರದ ಕೇಂದ್ರ ಸಹಕಾರಿ ಬ್ಯಾಂಕ್‌ನ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನವೆಂಬರ್ 20 ರಂದು ನಡೆಯು ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳು ಭಾಗವಹಿಸಲಿದ್ದು, ಈ ಕಾರ್ಯಕ್ರಮಕ್ಕೆ ಎಲ್ಲ ಜಿಲ್ಲೆಯ ಡಿಸಿಸಿ ಸಂಘಗಳ ಸದಸ್ಯರು, ವಿವಿಧ ಸಹಕಾರಿ ಸಂಘಗಳ ಸಹಕಾರಿಗಳು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೆ ವೈಯಕ್ತಿಕವಾಗಿ ಮನವಿ ಮಾಡಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಬ್ಯಾಂಕಿನ ಎಲ್ಲಾ ನಿರ್ದೇಶಕರು, ಸದಸ್ಯರು ಸೇರಿ ಸಮಾರೋಪ ಸಮಾರಂಭದ ಎಲ್ಲಾ ಸಿದ್ದತೆ ಮಾಡಿಕೊಳ್ಳಲಾಗಿದೆ. ಸಮಾರಂಭದಲ್ಲಿ ಸಹಕಾರಿ ಇಲಾಖೆ ಎಲ್ಲಾ ಹಿರಿಯ, ಮಾಜಿ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ದೇಶದಲ್ಲಿ ಎಲ್ಲರಿಗಿಂತಲು ಮೊದಲು ರಾಜ್ಯದಲ್ಲಿ ಸಹಕಾರಿ ಚಳುವಳಿ ಪ್ರಾರಂಭವಾದರೂ ಮಹಾರಾಷ್ಟ್ರ, ಗುಜರಾತ್ ಸಹಕಾರಿ ರಂಗದಲ್ಲಿ ಮುಂದಿದೆ. ಮಹಾರಾಷ್ಟ್ರ, ಗುಜರಾತ್ ಮಾದರಿಯಲ್ಲಿ ರಾಜ್ಯಕ್ಕೆ ಪ್ರೋತ್ಸಾಹ ಸಿಗಬೇಕು ಎನ್ನುವುದು ಎಲ್ಲಾ ಸಹಕಾರಿಗಳ ಮಹದಾಸೆಯಾಗಿದೆ. ನಮ್ಮಲ್ಲೂ ಸಹಕಾರ ಪ್ರೋತ್ಸಾಹ ನೀಡಿದರೆ ಜನರಿಗೆ ಇನಷ್ಟು ಆಸಕ್ತಿ ಮೂಡಿ ಸಹಕಾರಿ ಅಭಿವೃದ್ಧಿಯಿಂದ ಸಾರ್ವಜನಿಕರಿಗೆ ಅನುಕೂಲವಾಗಲಿದೆ.

## ಸಿದ್ಧತೆಗಳ ಪರಿಶೀಲನೆ

ನವೆಂಬರ್ 20 ರಂದು ನಡೆಯುವ ಸಮಾರಂಭಕ್ಕೆ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಸಹಕಾರ ಸಚಿವರು ಸೇರಿದಂತೆ ವಿವಿಧ ಗಣ್ಯರು ಆಗಮಿಸುವ ಹಿನ್ನಲೆಯಲ್ಲಿ ವೇದಿಕೆ ವಿನ್ಯಾಸ, ಆಸನಗಳ ವ್ಯವಸ್ಥೆ ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆಗಳ ಕುರಿತು ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷರೂ ಆದ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಅವರು ಪರಿಶೀಲನೆ ನಡೆಸಿದರು.

ಇದಕ್ಕೆ ಪೂರಕವಾಗಿ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಸೇರಿದಂತೆ ಸಚಿವರುಗಳಿಗೆ ಎಲ್ಲಾ ಸಹಕಾರಿಗಳು ಡಿಸಿಸಿ ಬ್ಯಾಂಕ್ ಅಧ್ಯಕ್ಷರು, ನಿರ್ದೇಶಕರು ಸೇರಿ ಮನವಿ ಮಾಡಿಕೊಳ್ಳಲಿದ್ದೇವೆ ಎಂದು ಅವರು ತಿಳಿಸಿದರು.

ಇದು ಪಕ್ಷಾತೀತ ಸಮಾರಂಭ. ಕೇವಲ ಸಹಕಾರಿ ರತ್ನಗಳಿಗೆ ಪ್ರಶಸ್ತಿ, ಪ್ರೋತ್ಸಾಹ ನೀಡುವ ಕಾರ್ಯಕ್ರಮ ಅಷ್ಟೇ ಅಲ್ಲ. ಜೊತೆಗೆ ಸಹಕಾರಿ ತತ್ವಕ್ಕೆ ಶಕ್ತಿ ತುಂಬಬೇಕು ಎನ್ನುವ ಪ್ರಯತ್ನವಾಗಿದೆ. ಸಮಾರೋಪ ಸಮಾರಂಭದಲ್ಲಿ ಸಹಕಾರಿ ಕಟ್ಟಡಗಳು ಉದ್ಘಾಟನೆ ನೆರವೇರಲಿವೆ. ಸಮಾರಂಭಕ್ಕೆ ಅಂದಾಜು ಮೂವತ್ತು ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

# ವೃಕ್ಷತ್ಥಾನ್ ಹೆರಿಟೇಜ್ ರನ್‌ಗೆ ವಿದೇಶಿ ಓಟಗಾರರ ನೊಂದಣಿ

ಉದಯರಶ್ಮಿ ನ್ಯೂಸ್

ವಿಜಯಪುರ: ನಗರದಲ್ಲಿ ಡಿಸೆಂಬರ್ 24 ರಂದು ನಡೆಯಲಿರುವ ವೃಕ್ಷತ್ಥಾನ್ ಹೆರಿಟೇಜ್ ರನ್-2023ಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ವಿದೇಶಗಳಿಂದಲೂ ಓಟಗಾರರು ಹೆಸರು ನೋಂದಾಯಿಸಿದ್ದಾರೆ. ಈ ಮೂಲಕ ಈ ಬಾರಿಯ ವೃಕ್ಷೋತ್ಥಾನ್ ಗೆ ಭರ್ಜರಿ ಬೆಂಬಲ ವ್ಯಕ್ತವಾಗುತ್ತಿದೆ.

ಶ್ರಮದ ಫಲವಾಗಿ ಪರಿಸರ ಮತ್ತು ಪ್ರಾಚೀನ ಸ್ಮಾರಕಗಳ ಬಗ್ಗೆ ಜಾಗೃತಿ ಹಾಗೂ ಸಂರಕ್ಷಣೆ ಸಂದೇಶವನ್ನು ಹೊಂದಿರುವ ಮತ್ತು ನಡೆದಾಡುವ ದೇವರು ಶ್ರೀ ಸಿದ್ದೇಶ್ವರ ಸ್ವಾಮೀಜಿಗಳಿಗೆ ಗೌರವ ಸಲ್ಲಿಸುವ ಸದುದ್ದೇಶದಿಂದ ಈ ಓಟ ಆಯೋಜಿಸಲಾಗಿದೆ. ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು ಈ ಓಟದ ಆಯೋಜನೆಯ ರೂವಾರಿಯಾಗಿದ್ದು, ಈಗಾಗಲೇ ವಿಜಯಪುರ ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ಮತ್ತು ನಾನಾ ಹೊರ ರಾಜ್ಯಗಳಿಂದಲೂ ಮ್ಯಾರಾಥಾನ್ ಓಟಗಾರರು ಹೆಸರು ನೋಂದಾಯಿಸುತ್ತಿದ್ದಾರೆ.



ಸೇತುಮಾಧವ ಕುಲಕರ್ಣಿ



ಸೇತುಮಾಧವ ಕುಲಕರ್ಣಿ

ಆನಲೈನ್ ಮೂಲಕ ಹೆಸರು ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದ್ದು, ಈಗ ಅಮೇರಿಕದಲ್ಲಿ ನಾನಾ ಉದ್ಯಮಗಳಲ್ಲಿ ಉನ್ನತ ಸ್ಥಾನದಲ್ಲಿರುವ ಇಬ್ಬರು ಅಧಿಕಾರಿಗಳು ಈ ಹೆರಿಟೇಜ್ ರನ್ ನಲ್ಲಿ ಪಾಲ್ಗೋಳ್ಳಲು ಹೆಸರು ನೋಂದಾಯಿಸಿದ್ದಾರೆ. ಕ್ಯಾಲಿಫೋರ್ನಿಯಾದಲ್ಲಿರುವ ವೆನಾಫಿ ಕಂಪ್ಯೂಟರ್ ಸಲೂಷನ್ಸ್ ಕಂಪನಿಯ ಉಪಾಧ್ಯಕ್ಷ ಉಪಾಧ್ಯಕ್ಷ ಸೇತುಮಾಧವ ಕುಲಕರ್ಣಿ ಅವರು 21 ಕಿ. ಮೀ. ಹೆಸರು ನೋಂದಾಯಿಸಿದ್ದಾರೆ. ಅಲ್ಲದೇ, ಮಿಚಿಗನ್ ನಲ್ಲಿರುವ ಎರ್ಬಾರಸೆನ್ಸ್ ಎಲೆಕ್ಟ್ರಾನಿಕ್ಸ್ ಕಂಪನಿಯ ಸಂಸ್ಥಾಪಕ ಅಧ್ಯಕ್ಷ ಎಲೆಕ್ಟ್ರಾನಿಕ್ ಕಂಪನಿಯ ಗಿರೀಶ ಕುಲಕರ್ಣಿ ಅವರು 10 ಕಿ. ಮೀ. ಓಟದಲ್ಲಿ ಪಾಲ್ಗೋಳ್ಳಲಿದ್ದಾರೆ. ಬೆಂಗಳೂರಿನ ಸಾಫ್ಟವೇರ್ ಎಂಜಿನಿಯರ್ ಮತ್ತು ಹಾಫ್ ಮ್ಯಾರಾಥಾನ್ ನಲ್ಲಿ ಸಕ್ರೀಯರಾಗಿರುವ ರಘು ಸಾಲೋಟಗಿ ಅವರ ಮೂಲಕ ಮಾಹಿತಿ ತಿಳಿದ ಅಮೇರಿಕದ ಇಬ್ಬರೂ ಓಟಗಾರರು ಹೆಸರು ನೋಂದಾಯಿಸಿದ್ದಾರೆ.

ಈಗಾಗಲೇ ಮಕ್ಕಳು, ಯುವಕರು ಮತ್ತು ಹಿರಿಯರೂ ಕೂಡ ಆನಲೈನ್ ಮೂಲಕ ನೋಂದಣಿ ಮಾಡಿಸುವ ಮೂಲಕ ವೃಕ್ಷೋತ್ಥಾನ್ ಹೆರಿಟೇಜ್ ರನ್- 2023ರಲ್ಲಿ ಪಾಲ್ಗೋಳ್ಳಲು ಸಜ್ಜಾಗಿದ್ದಾರೆ.

ಈ ಓಟದಲ್ಲಿ ಪಾಲ್ಗೋಳ್ಳಲು ಇಚ್ಛಿಸುವವರು www.vrukshathon.co.in ಮೂಲಕ ಆನಲೈನ್ ನಲ್ಲಿ ಹೆಸರು ನೋಂದಾಯಿಸಬಹುದಾಗಿದೆ ಎಂದು ನೋಂದಣಿ ಸಮಿತಿಯ ರಾಜು ಯಲಗೋಡ ಮತ್ತು ವೀರೇಂದ್ರ ಗುಚ್ಚೆಟ್ಟಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಐವರು ಸಾಧಕರಿಗೆ "ಬೆಳ್ಳಿ ಸಂಭ್ರಮ-2022" ಗೌರವ

ಉದಯರಶ್ಮಿ ನ್ಯೂಸ್

ನಿಡಗುಂದಿ: ಕನ್ನಡ ಪುಸ್ತಕ ಪರಿಷತ್ತು ತನ್ನ 25ನೆಯ ಬೆಳ್ಳಿ ಸಂಭ್ರಮ ಹಬ್ಬದ ನಿಮಿತ್ತವಾಗಿ

ಐವರು ಸಾಧಕರಿಗೆ "ಬೆಳ್ಳಿ ಸಂಭ್ರಮ-2022"ರ ಗೌರವಕ್ಕೆ ಆಯ್ಕೆ ಮಾಡಿದೆ.

ಬಾಗಲಕೋಟೆಯ ಸೋಮಲಿಂಗ ಗೆಣ್ಣೂರ (ಆಡಳಿತ), ಬೆಂಗಳೂರಿನ ಅಬೂಬಕರ ಮುಜಾವರ (ಸಂಕೀರ್ಣ), ವಿಜಯಪುರದ ಶರಣು ಸಬರದ (ಸಾಮಾಜಿಕ), ಬೀಳಗಿಯ ಬಾಳನಗೌಡ ಪಾಟೀಲ (ಜಾನಪದ) ಮತ್ತು ಆಲಮೇಲದ ಶ್ರೀಮತಿ ವಿಜಯಲಕ್ಷ್ಮಿ ರ. ಕತ್ತಿ (ಪ್ರಕಾಶನ) ಅವರನ್ನು ಆಯ್ಕೆ ಮಾಡಲಾಗಿದೆ.



ಗೌರವವು ಅವರ ಒಟ್ಟು ಸಾಂಸ್ಕೃತಿಕ ಚಟುವಟಿಕೆಗೆ ಆಗಿದ್ದು, ಸ್ಮರಣಿಕೆ, ಪ್ರಮಾಣ ಪತ್ರ, ಫಲಪುಷ್ಪಗಳನ್ನೊಳಗೊಂಡಿರುತ್ತದೆ.

ನಿಡಗುಂದಿ ತಾಲ್ಲೂಕಿನ ಆಲಮಟ್ಟಿಯ ಹರ್ಡೇಕರ ಮಂಜಪ್ಪ ಸಭಾಭವನದಲ್ಲಿ ದಿನಾಂಕ 23-11-2023ರಂದು ನಡೆವ ಕನ್ನಡ ಪುಸ್ತಕ ಪರಿಷತ್ತಿನ ಸಮ್ಮೇಳನದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯರಾದ ನಾಡೋಜ, ಡಾ.ಮ.ನು ಬಳಿಗಾರ ಹಾಗೂ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವ ವಿದ್ಯಾಲಯದ ಕುಲಪತಿಗಳಾದ ಡಾ. ಬಿ.ಕೆ.ತುಳಸಿಮಾಲಾ ಪ್ರಶಸ್ತಿಗಳನ್ನು ಪ್ರದಾನ ಮಾಡುವರೆಂದು ಪರಿಷತ್ತಿನ ಸಂಚಾಲಕ ಮೋಹನ ಕಟ್ಟಿಮನಿ ಹಾಗೂ ಪ್ರದಾನ ಕಾರ್ಯದರ್ಶಿ ಶಂಕರ ಬೈಚಬಾಳ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದರಬಾರ ಸಂಸ್ಥೆ ಅಧ್ಯಕ್ಷರಿಗೆ ನೌಕರರಿಂದ ಸನ್ಮಾನ

ಉದಯರಶ್ಮಿ ನ್ಯೂಸ್

ವಿಜಯಪುರ: ದರಬಾರ ಸಮೂಹ ಶಿಕ್ಷಣ ಸಂಸ್ಥೆಯ ವಿದ್ಯಾವರ್ಧಕ ಸಂಘದ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ದಿನಾಂಕ 17-11-2023 ಮುಂಜಾನೆ/9,40 ಗಂಟೆಗೆ ವಿವಿಧ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ 'ಡಿ' ಗ್ರುಪ್ ದ ನೌಕರರು ದೀಪಾವಳಿಯಂದು ಸಂಸ್ಥೆಯು ಹಬ್ಬದ ಪ್ರಯುಕ್ತ ಬೋನಸ್ ನೀಡಿದ ಕಾರಣ ಪ್ರೀತಿಯ ದ್ಯೋತಕವಾಗಿ ಅಭಿಮಾನದಿಂದ ಸಂಸ್ಥೆಯ ಅಧ್ಯಕ್ಷ ರಾಜೇಶ್ 'ಡಿ' ದರಬಾರ, ಉಪಾಧ್ಯಕ್ಷ ಕೆ.ಜಿ. ದೇಶಪಾಂಡೆ ಹಾಗೂ ಆಡಳಿತ ಮಂಡಳಿಯ ಹಿರಿಯ ಸದಸ್ಯ ಡಿ.ಸಿ. ದರಬಾರ ಅವರನ್ನು ಸಂಸ್ಥೆಯ ಸಮನ್ವಯ ಅಧಿಕಾರಿ ಡಾ. ವಿ.ಬಿ ಗ್ರಾಮ ಪುರೋಹಿತ ಹಾಗೂ 'ಡಿ' ಗ್ರುಪ್ ನೌಕರರು ಸಂತಸದಿಂದ ಗೌರವಾನ್ವಿತರನ್ನು ಸನ್ಮಾನಿಸಿದರು.



ಬನಸಿಲಾಲ ವಿಠ್ಠಲದಾಸ ದರಬಾರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಜಿ.ಎಚ್ ಮಣ್ಣೂರ, ಡಿ.ಎನ್ ದರಬಾರ ಬಾಲಕಿಯರ ಪ್ರೌಢಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ಡಿ.ವಿ. ಚೌಧರಿ, ಪಾಂಡುರಂಗ ಜಿ ರೊಟ್ಟಿ, ಅನಂತ ದೇಶಪಾಂಡೆ, ಮುಖ್ಯೋಪಾಧ್ಯಾಯ ರಮೇಶ್ ಕೋಟ್ಯಾಳ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ಕಾಲುವೆ ಕಾಮಗಾರಿ ಪೂರ್ಣಗೊಳಿಸದಿದ್ದರೆ ಪ್ರತಿಭಟನೆ ಎಚ್ಚರಿಕೆ

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ತಾಲೂಕಿನ ಅಗಸಬಾಳ ಗ್ರಾಮದ ಕೆರೆ ಬತ್ತಿ ಈ ಭಾಗದ ಜನ ಜಾನುವಾರು ಸಾಕಷ್ಟು ಹೈರಾಣಾಗಿದ್ದಾರೆ. ಕೆರೆ ತುಂಬುವ ಯೋಜನೆಯಡಿ ಅಗಸಬಾಳ ಗ್ರಾಮದ ಕೆರೆ ಕೂಡ ಇದ್ದು ಕೆರೆ ತುಂಬಲು ಅಧಿಕಾರಿಗಳು ಕಾಲುವೆ ಕಾಮಗಾರಿಯ ಅಪೂರ್ಣ ನೆಪ ಹೇಳುತ್ತಿದ್ದಾರೆ. ಅಪೂರ್ಣವಾದ ಕಾಲುವೆ ಕಾಮಗಾರಿಯನ್ನು ಪೂರ್ಣಗೊಳಿಸಿ ಕೂಡಲೇ ಕೆರೆ ತುಂಬಲು ಅಧಿಕಾರಿಗಳು ಮುಂದಾಗಬೇಕು. ಇಲ್ಲವಾದಲ್ಲಿ ಸಾವಿರಕ್ಕೂ ಹೆಚ್ಚು ರೈತರ ಪಡೆ ಅಗಸಬಾಳ ಗ್ರಾಮದಿಂದ ಆಲಮಟ್ಟಿಯ ಕೆಬಿಜೆಎನ್ಎಲ್ ಕಚೇರಿಯ ವರೆಗೆ ಬೃಹತ್ ಪ್ರತಿಭಟನಾ ರ್‍ಯಾಲಿ ಹಮ್ಮಿಕೊಳ್ಳುವ ಮೂಲಕ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸುವ ಎಚ್ಚರಿಕೆಯನ್ನು ನೀಡಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಈ ಭಾಗದ ರೈತರಾದ ಎನ್.ಆರ್.ಮೊಕಾಶಿ, ರುದ್ರಗೌಡ ಪಾಟೀಲ, ದುಂಡಪ್ಪ ಅರಸುಣಗಿ, ಅರವಿಂದ ಕಾಶಿನಕುಂಟಿ, ಶರಣಯ್ಯ ಹಿರೇಮಠ, ಅಪ್ಪು ಕುಂಬಾರ, ಕಾಶಿನಾಥ ಅರಸುಣಗಿ, ಮಹಾಂತೇಶ ಕಾಶಿನಕುಂಟಿ, ರಾಮನಗೌಡ ಬಿರಾದಾರ, ಬಸನಗೌಡ ಪಾಟೀಲ, ಮುತ್ತಪ್ಪ ಉಪ್ಪಲದಿನ್ನಿ, ಸಿದ್ದಪ್ಪ ಚಲವಾದಿ, ಕಾಶಪ್ಪ ಮಾದರ, ಯಲ್ಲಾಲಿಂಗ ಉಪ್ಪಲದಿನ್ನಿ, ಸಿದ್ದು ಲೋಟಗೇರಿ, ನಿಂಗಬಸಪ್ಪ ಬಿಸನಾಳ ಸೇರಿದಂತೆ ಮತ್ತಿತರರು, ಅಗಸಬಾಳ ಗ್ರಾಮದ ಕೆರೆಯು ಐತಿಹಾಸಿಕ ಪ್ರಸಿದ್ದಿ ಪಡೆದಿದ್ದು, ಈ ಗ್ರಾಮದ ಮಾತ್ರವಲ್ಲದೇ ಸುತ್ತಮುತ್ತಲಿನ ಹಳ್ಳಿಗಳ ರೈತರು ಇದೇ ಕೆರೆಯ ನೀರನ್ನು ಅವಲಂಬಿಸಿದ್ದಾರೆ. ಕಳೆದ 5-6 ವರ್ಷಗಳಿಂದ ಸರಿಯಾಗಿ ಮಳೆಯಾಗದ ಕಾರಣ ನೀರಿಲ್ಲದೇ ಈ ಕೆರೆ ಬತ್ತಿ ಹೋಗಿದ್ದು ಈ ಭಾಗದಲ್ಲಿ ಅಂತರ್ಜಲ ಮಟ್ಟ ಕಡಿಮೆಯಾಗಿ ಕುಡಿಯಲೂ ನೀರು ಸಿಗದೇ ಹಲವಾರು ಜಾನುವಾರುಗಳು ಸಾವನ್ನಪ್ಪಿವೆ. ರೈತರನ್ನು ಒಂದೆಡೆ ಬರಗಾಲ ಕಾಡುತ್ತಿದ್ದರೆ ಇನ್ನೊಂದೆಡೆ ಅಧಿಕಾರಿಗಳು ಕಾಡುತ್ತಿದ್ದಾರೆ. ಕೆರೆ ತುಂಬಿಸುವ ಯೋಜನೆಯ ಅಡಿಯಲ್ಲಿ ಅಗಸಬಾಳ ಕೆರೆ ಕೂಡ ಸ್ಥಾನ ಪಡೆದಿದ್ದು ಹೆಸರಿಗೆ ಮಾತ್ರ ಎಂಬಂತಾಗಿದೆ. ಸುತ್ತಮುತ್ತಲಿನ ಗ್ರಾಮಗಳ ಕೆರೆಗಳನ್ನು ತುಂಬಿದ ಅಧಿಕಾರಿಗಳು ಈ ಕೆರೆ ತುಂಬಲು ಮಲತಾಯಿ ಧೋರಣೆ ತೋರುತ್ತಿದ್ದಾರೆ. ಈ ಕುರಿತು ಹಲವಾರು ಬಾರಿ ಮೇಲಾಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗುತ್ತಿಲ್ಲ. ಕೆರೆ ತುಂಬಲು ಯಾಕೆ ಮುಂದಾಗುತ್ತಿಲ್ಲ ಎಂಬ ಪ್ರಶ್ನೆಗೆ ಕೆರೆಗೆ ನೀರು ತುಂಬುವ ಕಾಲುವೆ ಕಾಮಗಾರಿ ಅಪೂರ್ಣವಾಗಿದೆ ಎಂದು ಹೇಳಿ ಜಾರಿಕೊಳ್ಳುತ್ತಿದ್ದಾರೆಯೇ ಹೊರತು ಅಪೂರ್ಣವಾಗ ಕಾಮಗಾರಿಯನ್ನು ಪೂರ್ಣಗೊಳಿಸಲು ಮುಂದಾಗುತ್ತಿಲ್ಲ.

ಈ ಕೂಡಲೇ ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳು ಅಪೂರ್ಣಗೊಂಡಿರುವ ಕಾಲುವೆ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಿ ಕೆರೆಗೆ ನೀರು ಹರಿಸಲು ಮುಂದಾಗಬೇಕು. ಇಲ್ಲವಾದಲ್ಲಿ ಈ ಭಾಗದ ಅಂದಾಜು 1000 ಕ್ಕೂ ಹೆಚ್ಚು ರೈತರು ಪ್ರತಿಭಟನಾ ರ್‍ಯಾಲಿ ಹಮ್ಮಿಕೊಂಡು ಉಪವಾಸ ಸತ್ಯಾಗ್ರಹಕ್ಕೆ ಮುಂದಾಗುವದಾಗಿ ತಿಳಿಸಿದ್ದಾರೆ.

# ಅಂತರ್ ಕಾಲೇಜು ಮಟ್ಟದ ಕಬಡ್ಡಿ ಪಂದ್ಯಾವಳಿ ಇಂದು

ಉದಯರಶ್ಮಿ ನ್ಯೂಸ್

ಸಿಂದಗಿ: ಪಟ್ಟಣದ ಬಸ್ ನಿಲ್ದಾಣದ ಹಿಂದುಗಡೆಯಿರುವ ಸಾತವಿರೇಶ್ವರ ಸಭಾಭವನದಲ್ಲಿ ನ.18 ಮತ್ತು 19 ರಂದು ಶ್ರೀ ಪದ್ಮರಾಜ ಮಹಿಳಾ ಪದವಿ ಕಾಲೇಜು ಹಾಗೂ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯ ವಿಜಯಪುರ ಇವರ ಸಂಯುಕ್ತಾಶ್ರಯದಲ್ಲಿ ಅಂತರ್ ಕಾಲೇಜು ಮಟ್ಟದ್ ಕಬಡ್ಡಿ ಪಂದ್ಯಾವಳಿ ಹಾಗೂ ಆಯ್ಕೆಯ ಪ್ರಕ್ರಿಯೆ ಜರುಗಲಿದೆ ಎಂದು ಪ್ರಾಚಾರ್ಯ ಶಿವಮಾಂತ ಪೂಜಾರಿ ತಿಳಿಸಿದರು.

ನಗರದ ಶ್ರೀ ಪದ್ಮರಾಜ ಮಹಿಳಾ ಪದವಿ ಮಹಾವಿದ್ಯಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾನಿಲಯ ಸಹಯೋಗದಲ್ಲಿ ಮಹಾವಿದ್ಯಾಲಯದ ವತಿಯಿಂದ ಮಹಿಳಾ ಕಬಡ್ಡಿ ಪಂದ್ಯಾವಳಿ ನಡೆಯಲಿದೆ. 15ಕ್ಕೂ ಹೆಚ್ಚು ತಂಡಗಳು ಭಾಗವಹಿಸುವ ನೀರಿಕ್ಷೆ ಇದೆ ಎಂದರು.



ನ.18ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವನ್ನು ಸಂಸ್ಥೆಯ ಅಧ್ಯಕ್ಷರಾದ ಡಾ. ಪ್ರಭುಸಾರಂಗದೇವ ಶಿವಾಚಾರ್ಯರು ಸಾನಿಧ್ಯವನ್ನು ಜಮಖಂಡಿಯ ಕೊಣ್ಣೂರ ಹೊರಗಿನ ಮಠದ ಡಾ. ವಿಶ್ವಪ್ರಭುದೇವ ಶಿವಾಚಾರ್ಯರು ವಹಿಸಲಿದ್ದಾರೆ. ತಹಶೀಲ್ದಾರ್ ಪ್ರದೀಪಕುಮಾರ ಹಿರೇಮಠ ಉದ್ಘಾಟಿಸಲಿದ್ದಾರೆ. ಸಿಪಿಐ ಡಿ.ಹುಲುಗಪ್ಪ ಪಾರಿತೋಷಕ ವಿತರಣೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ದೈಹಿಕ ನಿರ್ದೇಶಕರು ಮತ್ತು ಮುಖ್ಯಸ್ಥರಾದ ಪ್ರೊ. ಸಕ್ಪಾಲ್ ಹೂವಣ್ಣ, ಅತಿಥಿಗಳಾಗಿ ಸಂಸ್ಥೆಯ ಉಪಾಧ್ಯಕ್ಷರಾದ ನಿಂಗಪ್ಪ ಕರೂರ, ಕಾರ್ಯದರ್ಶಿ ನೆಹರೂ ಪೋರವಾಲ್, ಸಹ-ಕಾರ್ಯದರ್ಶಿ ಅಶೋಕ ವಾರದ, ಖಜಾಂಚಿ ಗಂಗಾಧರ ಜೋಗುರ, ಸದಸ್ಯರಾದ ಅಶೋಕ ಮಸಳಿ, ರೇವಣಸಿದ್ದಪ್ಪ ಬೂದಿಹಾಳ, ಹಣಮಂತ್ರಾಯ ಪೂಜಾರ, ಡಾ.ಬಾಲಚಂದ್ರ ಉಪ್ಪಿನ, ವಿವೇಕಾನಂದ ಸಾಲಿಮಠ, ಆಡಳಿತಾಧಿಕಾರಿ ಡಾ.ಬಿ.ಜಿ.ಮಠ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಪಾರಿತೋಷಕ ವಿತರಣೆಯಲ್ಲಿ ನಮ್ಮ ಸಂಸ್ಥೆಯ ಅಂಗ ಸಂಸ್ಥೆಗಳ ಪ್ರಾಚಾರ್ಯರಾದ ಎಮ್.ಎಸ್. ಹೈಯಾಳಕರ, ಡಿ. ಎಮ್.ಪಾಟೀಲ, ವಿ.ಡಿ ಪಾಟೀಲ, ಬಿ.ಜಿ ಅವಟಿ, ನಿವೃತ್ತ ದೈಹಿಕ ನಿರ್ದೇಶಕ ಕೆ.ಹೆಚ್ ಸೋಮಾಪೂರ, ದೈಹಿಕ ನಿರ್ದೇಶಕ ರವಿ ಗೋಲಾ, ಜಗದೇವಿ ನಂದಿಕೋಲ ಇರಲಿದ್ದಾರೆ. ಮಾರ್ಗದರ್ಶಕರಾಗಿ ಎಸ್.ಎಸ್. ಮಲ್ಲೇದ, ಎಸ್.ಎಸ್. ಸಂಗಮ ಉದಯಕುಮಾರ ಬಿರಾದಾರ, ರೆಫ್ರಿಯಾಗಿ ಗವಿನಿದ್ದಪ್ಪ ಆನೆಗುಂದಿ, ಮಂಜುನಾಥ ತಳವಾರ, ಗುರುರಾಜ ಕುಳೇಕುಮಟಗಿ, ನೀಲಕಂಠ ಗೋಡೆಕರ, ಆರ್.ಆರ್ ನಿಂಬಾಳಕರ ನಡೆಸಿಕೊಡುವರು.

ಈ ವೇಳೆ ಮಹಾಂತೇಶ ನೂಲಾನವರ, ಉಮೇಶ ಪೂಜೇರಿ, ಗದಿಗಯ್ಯ ನಂದಿಮಠ, ಅನಿಲಕುಮಾರ ರಜಪೂತ, ಗಿರೀಶ ಕುಲಕರ್ಣಿ, ಪ್ರಭಾವತಿ ಮಾಲೀಪಾಟೀಲ, ಶೃತಿ ಹೂಗಾರ, ಮುರ್ತುಜಬೇಗಂ ಬಿರಾದಾರ, ಗಂಗಾ ಪಾಟೀಲ, ಮಂಗಳಾ ಈಳಗೇರ, ಡಿ. ಎಮ್.ಪಾಟೀಲ್, ಮಮತಾ ಹರನಾಳ, ಶಿವಶಂಕರ ಕುಂಬಾರ ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

## ಕಾಲುವೆಯಲ್ಲಿ ಕಾಲು ಜಾರಿ ರೈತ ಸಾವು

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಕಾಲುವೆಗೆ ಕಾಲು ಜಾರಿ ಬಿದ್ದು ರೈತನೊಬ್ಬ ಮೃತಪಟ್ಟ ಘಟನೆ ಕಡಕೋಳ ಗ್ರಾಮದ ಬಳಿ ಜರುಗಿದೆ.

ತಾಲ್ಲೂಕಿನ ಕಡಕೋಳ ಗ್ರಾಮದ ರೈತ ರೇವಣಸಿದ್ಧ ಖೈನೂರ(30) ಕಾಲು ಜಾರಿ ಕಾಲುವೆಗೆ ಬಿದ್ದ ರೈತನಾಗಿದ್ದಾನೆ. ಗುರುವಾರ ಸಾಯಂಕಾಲ ಜಮೀನಿಗೆ ನೀರು ಹರಿಸಿ ಮೋಟಾರು ಬಂದ ಮಾಡಲು ತೆರಳಿದ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಸ್ಥಳಕ್ಕೆ ಗ್ರಾಮಸ್ಥರು ಹಾಗೂ ಪೊಲೀಸರು ಭೇಟಿ ನೀಡಿ ಶೋಧ ಕಾರ್ಯ ಆರಂಭಿಸಿದ ನಂತರ ಬಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿಯೇ ಶುಕ್ರವಾರ ಬೆಳಿಗ್ಗೆ ಮೃತದೇಹ ದೊರೆತಿದೆ. ಕಲಕೇರಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಈ ಘಟನೆ ಸಂಭವಿಸಿದೆ.

## ಮೋರಟಗಿ: ಪುರಾಣ ಪ್ರಾರಂಭ ಇಂದು

ಉದಯರಶ್ಮಿ ನ್ಯೂಸ್

ಮೋರಟಗಿ: ತಾಲೂಕಿನ ಮೋರಟಗಿ ಗ್ರಾಮದ ಆರಾಧ್ಯ ದೇವರುಗಳಾದ ಶ್ರೀ ಸಿದ್ದರಾಮೇಶ್ವರ ಹಾಗೂ ಶ್ರೀ ಗುರು ರೇವಣಾಸಿದ್ದೇಶ್ವರ ಜಾತ್ರಾ ನಿಮಿತ್ಯವಾಗಿ ನ.18ರಂದು ರಾತ್ರಿ 8ಘಂಟೆಗೆ ಉಭಯ ಮಹಾತ್ಮರ ಮಹಾಪುರಾಣ ಕಾರ್ಯಕ್ರಮ ಪ್ರಾರಂಭವಾಗಲಿದೆ.

ಜೇರಟಗಿ ವಿರಕ್ತಮಠದ ಶ್ರೀ ಮಹಾಂತ ಸ್ವಾಮಿಗಳು ಸಾನಿದ್ಯ ವಹಿಸಲಿದ್ದಾರೆ. ಹೂವಿನಹಳ್ಳಿಯ ಗುರುಲಿಂಗಯ್ಯ ಸ್ವಾಮಿಗಳು ಪುರಾಣ ಪ್ರವಚನ ನೀಡಲಿದ್ದಾರೆ. ಸಿದ್ರಾಮಯ್ಯ ಮಠಪತಿ ಬಸವಣ್ಣನ ಸ್ಥಾನ ವಹಿಸಲಿದ್ದು, ಗಾಯಕರಾಗಿ ಗುರುನಾಥ ವಿಶ್ವಕರ್ಮ, ತಬಲಾ ವಾದಕರಾಗಿ ರವಿ ವಿಭೂತಿ ಸೇರಿದಂತೆ ಅನೇಕ ಕಲಾವಿದರು ಭಾಗವಹಿಸಲಿದ್ದಾರೆ.

ಕಾರಣ ಮೋರಟಗಿ ಸೇರಿದಂತೆ ಗ್ರಾಮದ ಸುತ್ತಮುತ್ತಲಿನ ಶ್ರೀ ಸಿದ್ದರಾಮೇಶ್ವರ ಹಾಗೂ ಗುರು ರೇವಣಾಸಿದ್ದೇಶ್ವರ ಸದ್ಭಕ್ತಾದಿಗಳು ಪುರಾಣ ಪ್ರವಚನವನ್ನು ಕೇಳಿ ಪಾವನರಾಗಬೇಕು ಎಂದು ಶ್ರೀ ಸಿದ್ದರಾಮೇಶ್ವ ಸಮಿತಿಯ ಆಡಳಿತ ಮಂಡಳಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದಿನಿಂದ ನ.30 ವರೆಗೆ ಪ್ರವಚನ

ಉದಯರಶ್ಮಿ ನ್ಯೂಸ್


ಮುದ್ದೇಬಿಹಾಳ: ಪಟ್ಟಣದ ಹಳೆಯ ಕಾಯಿಪಲ್ಲೆ ಮಾರುಕಟ್ಟೆಯಲ್ಲಿರುವ ಖಾಸ್ಗತೇಶ್ವರ ಮಠದಲ್ಲಿ ನ.18 ರಿಂದ ನ.30 ರವರೆಗೆ ಕಾರ್ತಿಕ ಮಾಸದ ಪ್ರಯುಕ್ತ ಪ್ರತಿದಿನ ಸಂಜೆ 6-30 ರಿಂದ 8-30 ರವರೆಗೆ ಪ್ರವಚನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಸಾಧನಾ ಮಹಿಳಾ ಒಕ್ಕೂಟ, ಅಕ್ಕನ ಬಳಗ ಹಾಗೂ ಯಶಸ್ವಿನಿ ಸಾಮಾಜಿಕ ಮಹಿಳಾ ಸಂಘ ಕುಂಟೋಜಿ ಇವರ ಸಹಯೋಗದೊಂದಿಗೆ ಇಂಗಳೇಶ್ವರ ವಚನ ಶಿಲಾ ಮಂಟಪದ ಮ.ನಿ.ಪ್ರ ಚೆನ್ನಬಸವ ಮಹಾಸ್ವಾಮಿಗಳು ಪ್ರವಚನ ನಡೆಸಿಕೊಡುವರು. ಬಾಲ ಶಿವಯೋಗಿ ಸಿದ್ದಲಿಂಗದೇವರು ದಿವ್ಯ ಸಾನಿಧ್ಯ ವಹಿಸಲಿದ್ದು, ವೇ.ಮೂ ಸಂಗಯ್ಯ ವಿರಕ್ತಮಠ ಸ್ವಾಮಿಗಳು ಉದ್ಘಾಟಿಸಲಿದ್ದಾರೆ. ಮಠದ ಎಲ್ಲ ಸದ್ಭಕ್ತರು ಪ್ರತಿದಿನ ಪ್ರವಚನ ಕಾರ್ಯಕ್ರಮದಲ್ಲಿ ಭಾಗಿಯಾಗುವಂತೆ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನ.26 ರಂದು ಸಂವಿಧಾನ ಅರಿವಿಗಾಗಿ ಓಟ

ಉದಯರಶ್ಮಿ ನ್ಯೂಸ್

ಸಿಂದಗಿ: ಪಟ್ಟಣದಲ್ಲಿ ನ.26ರ ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಸಂವಿಧಾನ ಅರಿವಿಗಾಗಿ ಓಟ ಎಂಬ ಶೀರ್ಷಿಕೆ ಅಡಿಯಲ್ಲಿ ಮ್ಯಾರಾಥನ್ ಓಟವನ್ನು ಪ್ಲೈಯ್ ಸ್ಪೋರ್ಟ್ಸ್ ಅಸೋಸಿಯೇಷನ್ ಹಾಗೂ ಗಣೇಶ ಕನಸ್ಟ್ರಕ್ಷನ್ಸ್ ಸಹಭಾಗಿತ್ವದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಪರಶುರಾಮ ಕಾಂಬಳೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಈ ಓಟದಲ್ಲಿ ಪ್ರಥಮ ಬಹುಮಾನ 25000ರೂ. ಹಾಗೂ ದ್ವಿತಿಯ ಬಹುಮಾನ 11000ರೂ. ಜೊತೆಗೆ ಪಾರಿತೋಷಕ ನೀಡಲಾಗುವುದು. ಸದರಿ ಓಟದಲ್ಲಿ ಪಾಲ್ಗೊಂಡ ಓಟಗಾರರಿಗೆ ಆಯೋಜಕರಿಂದ ಅಭಿನಂದನಾ ಪತ್ರ ಹಾಗೂ ಟೀ-ಶರ್ಟ್ ನೀಡಲಾಗುತ್ತದೆ. ಓಟದಲ್ಲಿ ಪಾಲ್ಗೋಳಲು ನ.23 ಸಾಯಂಕಾಲ 5ಗಂಟೆಯವರೆಗೆ ಹೆಸರು ನೊಂದಣಿಗೆ ಅವಕಾಶವಿದ್ದು, ಆಸಕ್ತರು ನೋಂದಣಿ ಮಾಡಿಕೋಳಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಗಾಗಿ ನಿಂಗರಾಜ ಗುಡಿಮನಿ, ಶಿವಾನಂದ ಆಲಮೇಲ 9663995571/9901447503 ಅವರನ್ನು ಸಂಪರ್ಕಿಸಬಹುದಾಗಿದೆ.

# ಪಪಂ ಸದಸ್ಯರಿಂದ ಸಚಿವ ಎಂ.ಬಿ.ಪಾಟೀಲರಿಗೆ ಸನ್ಮಾನ



ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಸಮಾಜಸೇವೆಗೆ ದೊರೆತ ಅಲ್ಪ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಉತ್ತಮವಾಗಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ದೇವರಹಿಪ್ಪರಗಿ ಪಟ್ಟಣ ಪಂಚಾಯತಿಗೆ ನಾಮನಿರ್ದೇಶನಗೊಂಡ ನೂತನ ಸದಸ್ಯರು, ಕಾಂಗ್ರೆಸ್ ಪದಾಧಿಕಾರಿಗಳು, ಬೆಂಬಲಿಗರೊಂದಿಗೆ ಗುರುವಾರ ಸನ್ಮಾನ ಮಾಡಿದ ಸಂದರ್ಭದಲ್ಲಿ ಮಾತನಾಡಿದರು.

ಒಳ್ಳೆಯ ಕೆಲಸ ಮಾಡಬೇಕು. ಹುದ್ದೆಗಳು ಶಾಶ್ವತವಲ್ಲ, ಸದಾ ಸಮಾಜಸೇವೆಯ ಧ್ಯೇಯವಿಟ್ಟುಕೊಂಡು ಕಾರ್ಯತತ್ಪರರಾಗಬೇಕು ಎಂದು ಸೂಚಿಸಿ, ನೂತನವಾಗಿ ನಾಮನಿರ್ದೇಶನಗೊಂಡ ರಾಜು ಮೆಟಗಾರ, ಸುನೀಲ್ ಕನಮಡಿ, ಹುಸೇನ ಕೊಕಟನೂರ ಇವರಿಗೆ ಮಾರ್ಗದರ್ಶನ ಮಾಡಿದರು.

ದೇವರಹಿಪ್ಪರಗಿ ಮತಕ್ಷೇತ್ರದ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಸರಿತಾ ನಾಯಿಕ, ನಜೀರ ಬೀಳಗಿ, ಬಾಶೇಷಾಬ ಹಳ್ಳಿ, ಹಣಮಂತ ದೊಡಮನಿ, ಉಸ್ಮಾನ ಹಚ್ಯಾಳ, ಲಾಲಾಸಾಹೇಬ ಮಳಖೇಡ, ಹುಸೇನ್ ಗೌಂಡಿ, ಮಹಮ್ಮದರಫೀಕ ಮೊಮೀನ, ಹಸನ್ ನಧಾಫ್, ಸಯ್ಯದ ಮುಲ್ಲಾ, ಪೈಗಂಬರ ಹುಣಶ್ಯಾಳ, ಅಬ್ದುಲ್ ವಾಲೀಕಾರ ಸೇರಿದಂತೆ ಇತರರು ಇದ್ದರು.

# ಮಹಿಳೆಯರ ಕಬಡ್ಡಿ: ಅಥಣಿ ಮುರುಗೇಂದ್ರ ಕಾಲೇಜು ಪ್ರಥಮ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಏಕ ವಲಯ ಅಂತರ ಕಾಲೇಜುಗಳ 2 ದಿನಗಳ ಮಹಿಳೆಯರ ಕಬಡ್ಡಿ ಪಂದ್ಯಾವಳಿ ಶುಕ್ರವಾರ ಕೊನೆಗೊಂಡಿತು.

ಪಟ್ಟಣದ ಶಾಸಕರ ಸರ್ಕಾರಿ ಮಾದರಿ ಬಾಲಕರ ಪ್ರಾಥಮಿಕ ಶಾಲಾ ಆವರಣದಲ್ಲಿ ಗುರುವಾರ ಆರಂಭವಾದ ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಏಕ ವಲಯ ಅಂತರ ಕಾಲೇಜುಗಳ ಮಹಿಳೆಯರ ಕಬಡ್ಡಿ ಪಂದ್ಯಾವಳಿಯಲ್ಲಿ ಅಥಣಿ ಶ್ರೀಶಿವಯೋಗಿ ಮುರುಗೇಂದ್ರ ಕಾಲೇಜು ಪ್ರಥಮ, ಎಸ್.ಎ.ಜಿ ಕಲಾ ಮತ್ತು ವಾಣಿಜ್ಯ ವಿದ್ಯಾಲಯ ಮರಡಿಮಠ ದ್ವಿತಿಯ, ಎಸ್.ಪಿ.ಎಮ್ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ರಾಯಭಾಗ ತೃತಿಯ ಹಾಗೂ ಬಸವನಬಾಗೇವಾಡಿಯ ಜಿ.ಎಫ್.ಜಿ.ಸಿ ಮಹಾವಿದ್ಯಾಲಯ ನಾಲ್ಕನೆಯ ಸ್ಥಾನ ಪಡೆದವು.



ದೈಹಿಕ ಶಿಕ್ಷಣ ನಿರ್ದೇಶಕ ಅಶೋಕಕುಮಾರ ಜಾಧವ ಹಾಗೂ ಪ್ರಾಂಶುಪಾಲ ಅಶೋಕ ಹೆಗಡೆ ನೇತೃತ್ವದಲ್ಲಿ ಸ್ಥಳೀಯರ ಸಹಕಾರದೊಂದಿಗೆ ಪಟ್ಟಣದಲ್ಲಿ ಇದೇ ಪ್ರಥಮ ಬಾರಿಗೆ ಆರಂಭವಾದ ಕಬಡ್ಡಿ ಪಂದ್ಯಾವಳಿ ಸ್ಥಳೀಯ ಕ್ರೀಡಾಪ್ರೇಮಿಗಳನ್ನು ಆಕರ್ಷಿಸುವಲ್ಲಿ ಸಫಲವಾಗಿ, ಯಶಸ್ವಿಯಾಗಿ ಮುಕ್ತಾಯಗೊಂಡಿತು. ಗುರುವಾರ ರಾತ್ರಿ 9 ಗಂಟೆಯವರೆಗೆ ಜರುಗಿದ ಹೊನಲು ಬೆಳಕಿನ ಪಂದ್ಯಗಳನ್ನು ಸಾರ್ವಜನಿಕರು ಉತ್ಸಾಹದಿಂದ ವೀಕ್ಷಿಸಿದರು.

ತಾಲ್ಲೂಕು ಆಡಳಿತ ಹಾಗೂ ಸ್ಥಳೀಯ ಆಡಳಿತದಿಂದ ಮಾಡಲಾದ ಊಟ ಹಾಗೂ ಉಪಹಾರ ವ್ಯವಸ್ಥೆ ಅಷ್ಟಾಗಿ ಉತ್ತಮವಾಗಿರಲಿಲ್ಲ. ಗುರುವಾರ ರಾತ್ರಿ ಕ್ರೀಡಾಳುಗಳಿಗೆ ಸಣ್ಣ ತಟ್ಟೆಯಲ್ಲಿ ಮಿತವಾಗಿ ಆಹಾರ ವಿತರಿಸಲಾಯಿತು. ವಸತಿ ವ್ಯವಸ್ಥೆಯು ಸಮಾಧಾನಕರವಾಗಿರಲಿಲ್ಲ ಎಂದು ಸ್ಪರ್ಧಾಳುಗಳು ದೂರಿದ್ದು ಕಂಡು ಬಂತು. ಶುಕ್ರವಾರ ಸಾಯಂಕಾಲ ವಿಜೇತರಿಗೆ ಬಹುಮಾನ ವಿತರಿಸುವ ಮೂಲಕ ಪಂದ್ಯಾವಳಿಗೆ ವಿದಾಯ ಹೇಳಲಾಯಿತು.

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಎಲ್.ಡಿ.ಮುಲ್ಲಾ, ಅಧೀಕ್ಷಕ ಜಗನ್ನಾಥ ಸಜ್ಜನ, ಪ್ರಕಾಶ ಮಲ್ಲಾರಿ, ರಾಜು ಕಾಖಂಡಕಿ, ಪಿ.ಸಿ.ತಳಕೇರಿ, ಎಸ್.ಬಿ.ಜಾಲವಾದಿ, ಅಕ್ರಮ್ ಪಾಷಾ ಸೇರಿದಂತೆ ವಿವಿಧ ಕಾಲೇಜುಗಳ ಕ್ರೀಡಾಪಟುಗಳು ಇದ್ದರು.

# ಸಾಯೋದಕ್ಕೆ ಒಂದೆರಡು ಕಾರಣಗಳಿದ್ದರೆ, ಬದುಕೋಕೆ ಸಾವಿರಾರು ದಾರಿಗಳಿವೆ

## ಕುಣಿಕೆಗೆ ಕೊರಳು ಕೊಡುವ ಮುನ್ನ ಕೊಂಚ ಯೋಚಿಸಿ ಜೀವ ಉಳಿಸಿ

### ವ್ಯಕ್ತಿತ್ವ ವಿಕಸನ ಮಾಲೆ.. 25

ಒಬ್ಬ ವಿಜಯವಂತ ವ್ಯಕ್ತಿಗೂ ಮತ್ತು ಇತರರಿಗೂ ಇರುವ ವ್ಯತ್ಯಾಸವು ಶಕ್ತಿಯ ಕೊರತೆ ಆಗಿರದೆ ಮನೋ ನಿರ್ಧಾರದ ಕೊರತೆ ಆಗಿರುತ್ತದೆ. ಎನ್ನುವ ಅರ್ಥಗರ್ಭಿತ ಮಾತುಗಳು ವಿನ್ಸ್ ಲೋಂಬಾರ್ಡ್ ಹೇಳಿರುವಂತವು. ಪ್ರತಿಯೊಬ್ಬರಿಗೂ ತಮ್ಮ ಬದುಕಿನ ಖಾಸಗಿ ವಿಷಯಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಸಂಪೂರ್ಣ ಹಕ್ಕಿರುತ್ತದೆ. ಹಾಗಂತ ಆನೆ ನಡದದ್ದೇ ದಾರಿ ಎಂಬಂತೆ ಕೆಲವು ನಿರ್ಧಾರಗಳನ್ನು ಅದರಲ್ಲೂ ನಾವು ನಮ್ಮ ಜೀವನವನ್ನು ಕೊನೆಗಾಣಿಸಿಕೊಳ್ಳಬೇಕೆಂದು ತೆಗೆದುಕೊಳ್ಳುವ ನಿರ್ಧಾರವನ್ನು ಸುತಾರಾಂ ಒಪ್ಪಲಾಗುವದಿಲ್ಲ.



ಜಯಶ್ರೀ ಜೆ. ಅಬ್ಬಿಗೇರಿ

● ಜಯಶ್ರೀ.ಜೆ.ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು, ಬೆಳಗಾವಿ
9449234142

ಮುಂಜಾನೆದ್ದು ಕಣ್ಮುಂದೆ ಪತ್ರಿಕೆ ಹಿಡಿದರೆ ಸಾಕು ಟಿವಿ ಆನ್ ಮಾಡಿದರೆ ಸಾಕು ಆತ್ಮಹತ್ಯೆಯ ಸುದ್ದಿಯ ಸರಮಾಲೆ ಕಣ್ಣು ಕಿವಿಗಳನ್ನು ಆವರಿಸಿಕೊಂಡು ಬಿಡುತ್ತವೆ. ಕಣ್ಣಗಲಿಸಿ ಕಿವಿ ಚೂಪು ಮಾಡಿ ಕಾರಣವೇನೆಂದು ತಿಳಿಯ ಹೋದರೆ ಬೆಚ್ಚಿ ಬೀಳುವ ಪ್ರಸಂಗ. ಎಂಥ ಕ್ಷುಲ್ಲಕ ಕಾರಣಗಳಿಗೆ ನೊಂದುಕೊಂಡು ಜೀವ ತೆತ್ತಿದ್ದಾರೆ. ಎಂದು ನಮ್ಮ ಮನಸ್ಸು ವಿಷಾದಗೊಂಡು ಮಮ್ಮಲ ಮರುಗುವದು. ಇತ್ತೀಚೆಗಂತೂ ನಮಗೆಲ್ಲ ಅನ್ನ ಕೊಟ್ಟು ಜೀವ ರಕ್ಷಿಸುವ ಅನ್ನದಾತರೇ ಸರಣಿ ಆತ್ಮಹತ್ಯೆಗೆ ಶರಣಾಗಿದ್ದುದು ತುಂಬಾ ಕಳವಳಕಾರಿ ವಿಷಯ. ಇದೆಲ್ಲ ಸಾಲದೆಂಬಂತೆ ಇನ್ನು ಮೇಲೆ ಅರಳಬೇಕಾದ ಸಣ್ಣ ಮೊಗ್ಗಿನ ರೂಪದಲ್ಲಿರುವ ಓದುವ ಮಕ್ಕಳು ಪರೀಕ್ಷೆಯಲ್ಲಿ ಚೆನ್ನಾಗಿ ಅಂಕಗಳನ್ನು ತೆಗೆಯಲಾಗಲಿಲ್ಲವೆಂದು, ಫೇಲಾಗಿದ್ದಕ್ಕೆ ಹೆತ್ತವರು ತಮ್ಮ ಸಣ್ಣ ಪುಟ್ಟ ಆಸೆಗಳನ್ನು ಈಡೇ- ರಿಸಲಿಲ್ಲವೆಂಬ ಕ್ಷುಲ್ಲಕ ಕಾರಣಗಳಿಗೆ, ಯುವಕರು ಪ್ರೇಮ ವೈಫಲ್ಯಗಳನ್ನು ನೆಪವಾಗಿರಿಸಿ ಖಿನ್ನತೆಗೊಳಗಾಗಿ ಜೀವ ಕಳೆದುಕೊಳ್ಳುತ್ತಿದ್ದಾರೆ. ನಮ್ಮನ್ನು ರಕ್ಷಿಸುವ ಹೊಣೆಯನ್ನು ಹೊತ್ತಿರುವ ದಿಟ್ಟತನಕ್ಕೆ ಹೆಸರಾಗಿರುವ ಮತ್ತು ಮನೋಸ್ಥೈರ್ಯವನ್ನು ಮೈಗೂಡಿಸಿಕೊಂಡಂತವರು ಸಹ ಇದೇ ದಾರಿ ಹಿಡಿದಿದ್ದಾರೆ. ಇದು ನಿಜಕ್ಕೂ ಶೋಚನೀಯ.



ಆತ್ಮಹತ್ಯೆ ಮಹಾ ಪಾಪ ಘೋರ ಅಪರಾಧ ಇಂಥ ಘೋರ ಕೃತ್ಯಗಳ ಸುದ್ದಿಗಳನ್ನು ಓದಿದಾಗ ಕೇಳಿದಾಗ ಮನಸ್ಸು ವಿಲ ವಿಲ ಒದ್ದಾಡುತ್ತದೆ. ಅಯ್ಯೋ! ಎಂಥ ಅನಾಹುವಾಯಿತಲ್ಲ ಎಂಥ ಕೆಲಸ ಮಾಡಿಕೊಂಡರಲ್ಲ ಎಂದು ದಿನವಿಡಿ ಅದೇ ಆಲೋಚನೆ ನಮ್ಮ ತಲೆಯಲ್ಲಿ ಗಿರ ಗಿರ ಸುತ್ತುತ್ತಿರುತ್ತದೆ, ತಮ್ಮ ವೈಯುಕ್ತಿಕ ಸಮಸ್ಯೆಗಳ ಬಗ್ಗೆ ಇತರರೊಂದಿಗೆ ಕುಳಿತು ಹಂಚಿಕೊಂಡಿದ್ದರೆ ಅತೀವ ಒತ್ತಡ ಮತ್ತು ಉದ್ವೇಗಕ್ಕೊಳಗಾಗಿ ದಿಕ್ಕು ತೋಚದಂತಾಗಿ ಇಂಥ ತಪ್ಪು ನಿರ್ಧಾರ ತೆಗೆದುಕೊಂಡು ಬದುಕನ್ನೇ ಮುಗಿಸಿಕೊಳ್ಳುವ ದುರಂತ ನಡೆಯಿತಲ್ಲ. ಕುಣಿಕೆಗೆ ಕೊರಳು ಕೊಡುವ ಮುನ್ನ ತಾವೇ ತಣ್ಣಗೆ ಕುಳಿತುಕೊಂಡು ಮೆಲ್ಲಗೆ ಯೋಚಿಸಿದ್ದರೂ ಈ ಅನಾಹುತ ತಪ್ಪಿಸಬಹುದಿತ್ತು ಎಂದು ಮನಸ್ಸು ರೋಧಿಸುತ್ತದೆ.

**ಕಷ್ಟಗಳು ಬದುಕಿನ ಅವಿಭಾಜ್ಯ ಅಂಗಗಳು**

ಕೆಲವು ಕುಟುಂಬಗಳಲ್ಲಿ ಅತೀವ ಖಿನ್ನತೆಗೊಳಗಾಗಿ ನೊಂದು ಜೀವನಕ್ಕೆ ಮುಖ ಮಾಡುವ ಧೈರ್ಯ ತೋರದೇ ಸಾಲು ಸಾಲಾಗಿ ಆತ್ಮಹತ್ಯೆ ಮಾಡಿಕೊಂಡ ಸಂಗತಿಗಳು ಕಾಣಸಿಗುತ್ತವೆ. ಅಂಥವರು ಬದುಕಿನಲ್ಲಿ ಸುಖ ಸಂತೋಷ ನಲಿವುಗಳು ಮಾತ್ರ ಇರಬೇಕೆಂದು ಅಂದುಕೊಂಡವರು. ಸುಖ ಸಂತಸದಂತೆ ನೋವು ಕಷ್ಟಗಳು ಬದುಕಿನ ಅವಿಭಾಜ್ಯ ಅಂಗಗಳು ಎಂದು ಮನಗಾಣುವದನ್ನು ನಿರಾಕ- ರಿಸುತ್ತಾರೆ. ಜೀವನ ತನ್ನದೊಬ್ಬನದೇ ಅಲ್ಲ. ನಮ್ಮನ್ನು ಆಶ್ರಯಿಸಿ ಬದುಕುವಂತವರು ನಮ್ಮ ಪ್ರೀತಿ ಮತ್ತು ಕಾಳಜಿಗಾಗಿ ಮಿಡಿಯುವ ಜೀವಿಗಳ ಹಕ್ಕೂ ನಮ್ಮ ಮೇಲಿದೆ ಎನ್ನುದನ್ನು ಮರೆತು ಬಿಡುತ್ತಾರೆ. ಪ್ರೀತಿಸುವವರೊಂದಿಗೆ ಕಾಲ ಕಳೆಯುತ್ತಿದ್ದರೆ ಬೆಟ್ಟದಂತ ಕಷ್ಟವು ಚಿಕ್ಕದಾಗಿ ಕಾಣುತ್ತದೆ. ಬದುಕನ್ನು ಖುಷಿಯಾಗಿ ನಡೆಸುವಂತೆ ಕಲಿಸುತ್ತದೆ. ಸಮುದ್ರ ಶಾಂತವಾಗಿದ್ದಾಗ ಯಾರು ಬೇಕಾದರೂ ಚುಕ್ಕಾಣಿ ಹಿಡಿಯಬಹುದು. ಆದರೆ ಸಮುದ್ರ ಉಕ್ಕೇರುವಾಗ ಚುಕ್ಕಾಣಿ ಹಿಡಿಯುವದೇ ಮುಖ್ಯ ನೆನಪಿರಲಿ. ಒಳ್ಳೆಯ ಕಾರ್ಯ ಮರೆತುಹೋಗುತ್ತದೆ. ಕೆಟ್ಟ ಕಾರ್ಯ ಜ್ಞಾಪಕದಲ್ಲಿರುತ್ತದೆ.

ಜೀವನ ಹೊಣೆಯಿಂದ ಕೂಡಿದೆ

ಜೀವನದಲ್ಲಿ ಸಮಸ್ಯೆಯಿಲ್ಲದವರು ಇಲ್ಲವೇ ಇಲ್ಲ. ಇದ್ದರೆ ಅವರು ನೆಲದ ಮೂರು ಆರು ಅಡಿಯಲ್ಲಿ ಮಲಗಿದ್ದಾರೆ. ಅಂದರೆ ಸತ್ತವರಿಗೆ ಮಾತ್ರ ಸಮಸ್ಯೆಯಿಲ್ಲ. ಪ್ರತಿದಿನವೂ ಹೊಸದು. ಹೀಗಾಗಿ ಅದು ಹೊಸ ಹೊಸ ಹೊಣೆಗಳ ಸಮಸ್ಯೆಗಳ ಮೂಟೆಯನ್ನು ಹೊತ್ತುಕೊಂಡು ಬರುತ್ತದೆ. ಸಂತಸದ ಮೂಟೆ ಬಂದಾಗ ನಗುತ್ತ ಸ್ವೀಕರಿಸುವಂತೆಯೇ ಹೊಸ ಹೊಣೆಗಳು ಹೆಗಲಿಗೇರಿದಾಗ ಜೀವನದಿಂದಲೇ ಪಲಾಯನಗೈಯದೇ ಅದೇ ನಗು ಮೊಗದಿಂದ ಸ್ವಾಗತಿಸಲು ಕಲಿತುಕೊಳ್ಳಬೇಕು. ಜೀವನ ಚಕ್ರದಲ್ಲಿ ಸುಖ ದುಃಖಗಳು ಬೈಸಿಕಲ್ಲಿನ ಕಡ್ಡಿಗಳಂತೆ ಅವು ಒಂದಾದ ಮೇಲೊಂದು ಬರುತ್ತ ಹೋಗುತ್ತವೆ. ದುಃಖ ದುಮ್ಮಾನಗಳು ಎದುರಾದಾದಾಗ ಹೆದರದೇ ಎದುರಿಸಿ. ಕತ್ತಲೆಯ ಹಿಂದೆಯೇ ಬೆಳಕಿದ್ದಂತೆ ದುಃಖದ ಬೆನ್ನ ಹಿಂದೆಯೇ ಸುಖವಿದೆ. ದುಃಖ ಎನ್ನುವದು ಕೇವಲ ಮನದ ಸ್ಥಿತಿ ಎಂಬುವದನ್ನು ಅರಿಯುವುದು ಮುಖ್ಯ. ದುಃಖ ಬೇರೆ ಯಾ- ರಿಗೂ ಇಲ್ಲ. ನಾನೇ ಪರಮ ದುಃಖಿಯೆಂದುಕೊಳ್ಳಬೇಡಿ. ನಿಮಗೆ ಚಪ್ಪಲಿ ಇಲ್ಲವೆಂದು ದುಃಖಿಸುವಾಗ ಕಾಲಿಲ್ಲದವರವನನ್ನು ನೋಡಿ ನೀವೆಷ್ಟು ಸುಖಿ ಎನ್ನುವುದು ಅರ್ಥವಾಗುತ್ತದೆ. ಕಲ್ಲಿನಂತೆನಿಸಿದ್ದ ಹೊಸ ಹೊಣೆಗಳು ಆಗ ಹೂವಿನಂತೆ ಹಗುರವೆನಿಸುತ್ತವೆ.

ರೇಷ್ಮೆ ಹುಳುವಿನಂತೆ ಗೂಡು ಕಟ್ಟಿಕೊಳ್ಳಬೇಡಿ

ಉಗುರಿನಿಂದ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡರಂತೆ ಎನ್ನುವ ವಾಡಿಕೆಯ ಮಾತೊಂದಿದೆ. ಸಣ್ಣ ಸಣ್ಣ ವಿಚಾರಗಳನ್ನು ದೊಡ್ಡದು ಮಾಡಿಕೊಂಡು ಗೋಳಾಡುವುದನ್ನು ಬಿಟ್ಟು ನಿಮ್ಮ ಕಂಗಳಲ್ಲಿ ಅರಳುತ್ತಿರುವ ಕನಸುಗಳನ್ನು ನನಸಾಗುವದರ ಕುರಿತು ಯೋಚಿಸಿ. ಜೀವನವೆಂದರೆ ಎಲ್ಲ ನಾವಂದುಕೊಂಡಂತೆ ನಡೆಯಲ್ಲ. ರಾಶಿ ರಾಶಿ ಅನಿರೀಕ್ಷಿತ ತಿರುವುಗಳು ದಿಢೀರನೆ ಎದುರಿಗೆ ಬಂದು ನಮ್ಮನ್ನು ದಿಕ್ಕು ಕಾಣದ ಗಾವಿಲರಂತೆ ನಡೆದುಕೊಳ್ಳುವ ಹಾಗೆ ಮಾಡುತ್ತವೆ. ಆಗ ರೇಷ್ಮೆ ಹುಳುವಿನಂತೆ ನಿಮ್ಮ ಸುತ್ತಲೂ ಗೂಡು ಕಟ್ಟಿಕೊಳ್ಳದೇ ಜೀವನದ ವಾಸ್ತವ ಸತ್ಯಗಳನ್ನು ಮತ್ತು ನೈಜತೆಯನ್ನು ಹಿರಿಯ ಅನುಭವಿಕರೊಂದಿಗೆ ಚರ್ಚಿಸಿ ಅನಿ- ರೀಕ್ಷಿತ ತಿರುವು ನಿಮ್ಮ ಜೀವನಕ್ಕೆ ಮಹತ್ವದ ತಿರುವು ಆಗುವಂತೆ ಮಾಡಿಕೊಳ್ಳಿ. ಕನಸುಗಳಿಗೆ ರೆಕ್ಕೆ ಕಟ್ಟಿ ನೋಡಿ ಮಾರ್ಗದರ್ಶಕ- ರಿಂದ ಬಲ ಪಡೆದು ನೋಡಿ ಆತ್ಮಹತ್ಯೆಯಂಥ ಹುಚ್ಚು ಕಲ್ಪನೆಗಳು ಹತ್ತಿರವೂ ಸುಳಿಯುವದಿಲ್ಲ. ನೂರಾರು ಕನಸುಗಳನ್ನು ಕಾಣಿ. ಕನಸುಗಳನ್ನು ಕಾಣಲು ಹಣ ತೆರಬೇಕಾಗಿಲ್ಲ ಅಲ್ಲವೆ? ಕಾಣುವ ಕನಸುಗಳೇ ಗುರಿಗಳಾಗಿ ಬದಲಾಗುತ್ತವೆ. ಗುರಿ ಹೊಂದಿದ ಬದುಕು ಜೀವ ಕಳೆದುಕೊಳ್ಳಲು ಮನಸ್ಸು ಮಾಡುವದಿಲ್ಲ ನೆನಪಿನಲ್ಲಿಡಿ.

ದೊಡ್ಡವರಾರು ಹುಟ್ಟಿನಿಂದಲೇ ದೊಡ್ಡವರಾಗಿಲ್ಲ

ಮಹಾಪುರುಷರ ಸಾಲಿನಲ್ಲಿ ಅಗ್ರ ಸ್ಥಾನ ಪಡೆಯುವ ಸಾಲು ಸಾಲು ಮಹನೀಯರೆಲ್ಲ ದೊಡ್ಡವರೆ. ಈ ದೊಡ್ಡವರೆಲ್ಲ ಹುಟ್ಟಿನಿಂದಲೇ ದೊಡ್ಡವರಾಗಿಲ್ಲ. ದೊಡ್ಡದನ್ನು ಸಾಧಿಸಬೇಕಾದರೆ ಕಲ್ಲು ಮುಳ್ಳುಗಳು ತುಂಬಿದ ಹಾದಿಯಲ್ಲಿ ಪಾದರಕ್ಷೆಗಳಿಲ್ಲದೆ ನಡೆದದ್ದು ಮನೋಬಲದಿಂದ ಕಷ್ಟಗಳ ಬಂಡೆಗಳನ್ನು ಪುಡಿ ಪುಡಿ ಮಾಡಿದ್ದು ಅವರ ಜೀವನ ಚರಿತ್ರೆ ಓದಿದಾಗ ನಮ್ಮ ಅರಿವಿಗೆ ಬರುತ್ತದೆ. ಕಷ್ಟಗಳ ಆಯಸ್ಸು ಅಲ್ಪ. ಮತ್ತು ತಾತ್ಕಾಲಿಕ ಎನ್ನುವದು ಇಂಥವರ ಜೀವನದಿಂದ ಅಥ- ರ್ವಾಗುವದು. ಕಷ್ಟದ ಪರ್ವತಗಳನ್ನೇ ಕರಗಿಸಿ ಸಾಧಿಸಿದವರ ಪಟ್ಟಿಯಲ್ಲಿ ಅಬ್ರಾಹಂ ಲಿಂಕನ್, ಲಾಲ್ ಬಹದ್ದೂರ



ಶಾಸ್ತ್ರೀ ಅಂಬೇಡ್ಕರ್, ಹೆಲೆನ್ ಕೆಲ್ಲರ್‌ಂತವರು ಮಿಂಚುತ್ತ ಎಲ್ಲೆಲ್ಲೂ ಕಂಗೊಳಿಸುತ್ತಿರುವಾಗ ಎಳ್ಳಿನಷ್ಟು ಕಷ್ಟವನ್ನು ಸಹಿಸಿಕೊಳ್ಳಲಾಗದೇ ಜೀವನವನ್ನು ಕೊನೆಗೊಳಿಸಿಕೊಳ್ಳುವದು ಎಷ್ಟು ಉಚಿತ? ಒಬ್ಬ ವ್ಯಕ್ತಿ ಸೋಲಿಸಲ್ಪಟ್ಟಾಗ ಅವನ ಮುಕ್ತಾಯವಾಗುದಿಲ್ಲ. ಆದ- ರೆ ಅವನು ಕೈ ಚೆಲ್ಲಿ ಕುಳಿತಾಗ ಮುಕ್ತಾಯವಾಗುತ್ತಾನೆ. ಯಾವನೂ ಪ್ರಯತ್ನ ಮಾಡುವದನ್ನು ನಿಲ್ಲಿಸುವವರೆಗೆ ವಿಫಲನಾಗುವದಿಲ್ಲ. ಸೋಲೇ ಗೆಲುವಿನ ಅವಿಭಾಜ್ಯದ ಅಂಗ. ಛಲವೇ ಬಲವೆಂಬ ಮಾತಿನಂತೆ ಕನಸಿಗೆ ಕಂಕಣ ಬದ್ಧರಾಗಿ ನಿಂತರೆ ಕಷ್ಟಗಳೆಲ್ಲ ಇಷ್ಟಗಳಾಗಿ ಬದಲಾಗುತ್ತವೆ. ಕಹಿಯೆಲ್ಲ ಸಿಹಿಯಾಗಿ ಸಂಭ್ರಮಿಸುವಂತೆ ಮಾಡುವುದರಲ್ಲಿ ಸಂದೇಹವೇ ಇಲ್ಲ.

ಅವಕಾಶಗಳಿಗೆ ಬರವಿಲ್ಲ

ವಿಶಾಲವಾದ ವಿಶ್ವದಲ್ಲಿ ಅವಕಾಶಗಳಿಗೆ ಬರವಿಲ್ಲ. ಅವಕಾಶಗಳ ಮಹಾಪೂರವೇ ನಿಮ್ಮ ಕಾಲಡಿಯಲ್ಲಿ ಕಾದು ಕುಳಿತಿ- ದೆ. ಕಣ್ತೆರೆದು ನೋಡುವ ಅರಿವು ಇರಬೇಕಷ್ಟೆ. ಹುಟ್ಟಿದ ಪ್ರತಿಯೊಂದು ಜೀವಿಗೂ ಜೀವಿಸುವ ಅವಕಾಶ ಇರುವಾಗ ನಮಗೆಲ್ಲ ಸುಂದರವಾಗಿ ಬದುಕುವ ಅವಕಾಶ ಇದ್ದೇ ಇದೆ ಎನ್ನುವದನ್ನು ಮರೆಯದಿರಿ. ಹಿಂದಿನದೆಲ್ಲ ತೆಗೆದು ಹಿತ್ತಲಲ್ಲಿ ಅಳುವದನ್ನು ಬಿಟ್ಟು ಒಂಚೂರು ಮನಸ್ಸನ್ನು ಹಗುರಗೊಳಿಸಿಕೊಂಡು ನಿಮ್ಮ ಬದುಕಿನ ಬಾಗಿಲನ್ನು ತಟ್ಟುವ ಅವಕಾಶಗಳೆಡೆಗೆ ದೃಷ್ಟಿ ಹರಿಸಿ. ಆಗ ಸುವರ್ಣ ಅವಕಾಶಗಳು ನಿಮ್ಮ ಕೈ ಹಿಡಿಯುತ್ತವೆ. ಸುಖದ ದಡ ಸೇರಿಸುತ್ತವೆ. ದಡ ಸೇರುವ ಮುನ್ನವೇ ಅಧೈರ್ಯದಿಂದ ಹೀನ ನಡೆತೆಯಿಂದ ಹೊರ ಬಂದು ಮುಳುಗಿ ಸಾಯುವ ವಿಚಾರದಿಂದ ಆಚೆ ಬರಲು ಸಾಧ್ಯವಾಗುತ್ತದೆ.

ಸವಾಲಿನ ಸರಪಳಿ ಕತ್ತರಿಸಲು ಅನುಭವದ ಕತ್ತರಿ ಬಳಸಿ

ಜೀವನವೆಂಬುದು ಸವಾಲುಗಳ ಸರಪಳಿಯಿದ್ದಂತೆ. ಈ ಸರಪಳಿಯನ್ನು ಕತ್ತರಿಸಲು ಅನುಭವದ ಕತ್ತರಿ ಬಳಸಿ. ತಲೆ ಇದ್ದವರು ಎಲೆ ಮಾರಿ ಜೀವನ ಮಾಡುವರಂತೆ. ತಲೆ ಬಳಸಿದರೆ ಬದುಕಿನ ಕಲೆ ಸಲೀಸಾಗಿ ಗೊತ್ತಾಗುತ್ತದೆ. ಒಮ್ಮೆ ಸಂತಸದ ಕಲೆ ಗೊತ್ತಾದ ಮೇಲೆ ಅದರಾಚೆ ಬಂದು ಹೇಡಿಗಳೆಂಬ ಹಣೆಪಟ್ಟಿ ಕಟ್ಟಿಕೊಳ್ಳಲು ಮನಸ್ಸು ಬರುವುದೇ ಇಲ್ಲ. ಸಾಯುವದಕ್ಕೆ ಒಂದೆರಡು ಕಾರಣಗಳಿದ್ದರೆ ಬದುಕೋಕೆ ನೂರಾರು ದಾರಿಗಳಿವೆ. ಅವುಗಳನ್ನು ಕಂಡುಕೊಳ್ಳುವ ವ್ಯವಧಾನ ಬೇಕಷ್ಟೆ. ಪ್ರತಿಯೊಬ್ಬರಿಗೂ ಪ್ರತಿಭೆಯನ್ನು ಕೊಟ್ಟ ದೇವರು ನಿಮಗೂ ಒಂದು ಪ್ರತಿಭೆಯನ್ನು ಕರುಣಿಸಿದ್ದಾನೆ. ಅದನ್ನು ಧಾರಾಳವಾಗಿ ಬಳಸಿ. ಆಗ ನೋಡಿ ಚಮತ್ಕಾರ. ನೀವು ಹೋದಲೆಲ್ಲ ನಿಮಗೆ ಮಣೆ ಮನ್ನಣೆ. ಇಂಥ ಮನ್ನಣೆ ದೊರೆತಾಗ ಅಯ್ಯೋ! ಎಂಥ ತಪ್ಪು ನಡೆದು ಹೋಗುತ್ತಿತ್ತು. ಜೀವ ಕಳೆದುಕೊಳ್ಳುವ ನಿರ್ಧಾರ ಮಾಡಿದ್ದೆ, ಆತುರಕ್ಕೆ ಹುಟ್ಟಿದವರ ಹಾಗೆ ನಡೆದುಕೊಂಡು ಬಿಟ್ಟಿದ್ದರೆ ಇಷ್ಟೊಂದು ಅಮೂಲ್ಯವಾದ ಜೀವನ ಕಳೆದುಕೊಂಡು ಬಿಡುತಿದ್ದೆನಲ್ಲ ಎಂಬ ಪಶ್ಚಾತ್ತಾಪ ಮೂಡದೇ ಇರದು.



ಜೀವನದ ಪ್ರತಿ ಪ್ರೀತಿ ಮೂಡದೇ ಇರದು.

ಹೊಂದಿಕೊಳ್ಳುವದೇ ಜಾಣ್ಮೆ

ಇತರರೊಂದಿಗೆ ಚೆನ್ನಾಗಿ ವ್ಯವಹರಿಸಿ ನಡುವಳಿಕೆಯಲ್ಲಿ ಪ್ರಾಮಾಣಿಕತೆಯನ್ನು ನಿರ್ಲಕ್ಷಿದೆ ವಾಸ್ತವಿಕತೆಗೆ ಒತ್ತು ನೀಡಿದರೆ ಜನ ನಿಮ್ಮೊಂದಿಗೆ ಪ್ರೀತಿಯಿಂದ ವ್ಯವಹ- ರಿಸುತ್ತಾರೆ. ಕೆಲವೊಮ್ಮೆ ಬಿಕ್ಕಟ್ಟಿನ ಪರಿಸ್ಥಿತಿ ಬಂದಾಗ ಹೊಂದಿಕೊಳ್ಳುವದೇ ಒಳಿತು. ಹೊಂದಿಕೊಳ್ಳುವದು ಅನೇಕ ಬಾರಿ ಜಾಣ್ಮೆ ಎಂದು ಕರೆಸಿಕೊಳ್ಳುತ್ತದೆ. ಹಾಗಂತ ಬಲಹೀನರಾಗಿ ಹೊಂದಿಕೊಳ್ಳುವದಲ್ಲ. ಬಲಹೀನತೆಯಿಂದ ಹೊಂದಿಕೊಂಡರೆ ನಿಮ್ಮ ಮೇಲೆ ಅಸಹ್ಯ ಭಾವನೆ ಉಂಟಾಗಿ ಆತ್ಮಹತ್ಯೆಯಂಥ ವಿಚಾರಗಳು ಒಳ ಹೊಕ್ಕುಬಿಡುತ್ತವೆ. ಹೊಂದಾಣಿಕೆ ಎಂದರೆ ಪ್ರತಿಯೊಂದಕ್ಕೂ ತಲೆ ಅಲ್ಲಾಡಿಸುವದಲ್ಲ. ಅತಿಯಾಗಿ ಪ್ರತಿಕ್ರಿಯಿಸದಿರುವದು. ಏಕ ಪಕ್ಷೀಯವಾಗಿ ಮಾತನಾಡದಿರುವದು. ಅತಿಯೆನ್ನಿಸುವಷ್ಟು ಕಟ್ಟಳೆಗಳನ್ನು ನಿಮ್ಮ ಮೇಲೆ ನೀವೇ ಹಾಕಿಕೊಳ್ಳಬೇಡಿ. ಕಟ್ಟಳೆಗಳಿರುವದು ನೀವು ಉಳಿದು



ಬೆಳೆಯಲೇ ಹೊರತು ಕಳೆಗುಂದಿಸಿ ಕಳೆದುಕೊಳ್ಳುವದಕ್ಕಲ್ಲ.

ಜೀವನ ನಮ್ಮ ಕೈಯಲ್ಲಿದೆ.

ಹುಟ್ಟು ಸಾವು ನಮ್ಮ ಕೈಯಲ್ಲಿಲ್ಲ ನಡುವಿನ ಜೀವನ ನಮ್ಮ ಕೈಯಲ್ಲಿಯೇ ಇದೆ. ದೇವರು ಕೊಟ್ಟ ಆಯುಸ್ಸನ್ನು ಸಂಪೂರ್ಣವಾಗಿ ನಿಮಗಾಗಿ ಅಷ್ಟೆ ಅಲ್ಲ ಇತರರಿಗಾಗಿ ಬದುಕಲಿಚ್ಛಿಸಬೇಕು. ಪದೇ ಪದೇ ಆತ್ಮಹತ್ಯೆಯ ವಿಚಾರ ಮನಸ್ಸನ್ನು ಬಾಧಿಸುತ್ತಿದ್ದರೆ ತಜ್ಞರನ್ನು ಮನೋವೈದ್ಯರನ್ನು ಭೇಟಿಯಾಗಿ ಅವರು ನೀಡಿದ ಸಲಹೆ ಸೂಚನೆಗಳನ್ನು ಚಾಚು ತಪ್ಪದೇ ಪಾಲಿಸಿ ಮಾನಸಿಕ ಶಕ್ತಿ ವೃದ್ಧಿಸುತ್ತದೆ. ಜೊತೆಯಲ್ಲಿರುವವರು ಅವರ ನೋವಿಗೆ ಸ್ಪಂದಿಸಿ ಪ್ರೀತಿ ಕಾಳ- ಜಿಯನ್ನು ವಹಿಸಿ ಅಕಾಲ ಮರಣವನ್ನು ತಡೆಯಬಹುದು. ಪ್ರೀತಿ ಎಂಬ ದಿವ್ಯ ಔಷಧಿಗೆ ಎಲ್ಲ ಕಾಯಿಲೆಗಳನ್ನು ವಾಸಿ ಮಾಡುವ ಮಹಾ ಶಕ್ತಿಯಿದೆ. ಜೀವನದಲ್ಲಿ ತುಂಬಾ ಬಳಲಿದ್ದೇನೆ ಹಿಂಸೆ ಅನುಭವಿಸಿದ್ದೇನೆ ಎಂಬ ಅವರ ನೋವು ನರಳಿಕೆಗೆ ಸಂಪೂರ್ಣ ಒಳ್ಳೆಯ ಕಿವಿಗಳಾಗಿ ಮನದಲ್ಲಿಯೇ ಮರುಗುತ್ತ ನಲುಗುತ್ತ ಬಾಡಿ ಹೋಗದಂತೆ ಎಲ್ಲ ಭಾವಗಳಿಗೆ ಸ್ಪಂದಿಸುವದು ಅಗತ್ಯವಿದೆ ಎನ್ನುವುದು ಮನಶಾಸ್ತ್ರಜ್ಞರ ಅಭಿಮತ. ಮಾನಸಿಕ ಪ್ರಶಾಂತತೆಗಾಗಿ ಯೋಗ ಧ್ಯಾನ ರೂಢಿಸಿಕೊಂಡರೆ ಅತ್ಯದ್ಭುತವಾದ ಪ್ರಭಾವ ಕಂಡು ಬರುತ್ತದೆ. ಚುರುಕಾಗಿ ಚಟುವಟಿ- ಕೆಯಿಂದಿರಲು ಲಘು ವ್ಯಾಯಾಮ ಮಾಡಿ, ಪ್ರಪಂಚದ ಎಲ್ಲ ಕಾರ್ಯಗಳೂ ಮಂದಹಾಸ ನೀಡಿ ಎನ್ನುತ್ತವೆ. ಹಾಗಾಗಿ ಉಲ್ಲಸಿತವಾಗಿರಲು ಹಾಸ್ಯಕ್ಕೆ ಮೊರೆಹೋಗಿ.

ಒಮ್ಮೆ ಮುಗ್ಗರಿಸುವಿಕೆ ಒಂದು ಬೀಳುವಿಕೆಯನ್ನು ತಡೆಯುತ್ತದೆ ಎನ್ನುತ್ತಾರೆ. ಬೀಳುವಿಕೆಯನ್ನು ಜ್ಞಾನದಿಂದ ತಡೆಯಬಹುದು. ಅಂಧಕಾರದಿಂದ ಜೀವ ಕಳೆದುಕೊಳ್ಳುವುದಕ್ಕಿಂತ ಪ್ರಬುದ್ಧತೆಯ ದೃಷ್ಟಿಕೋನದಲ್ಲಿ ಪ್ರಪಂಚದಲ್ಲಾಗುವ ದಿನನಿತ್ಯದ ಬದಲಾವಣೆಗಳನ್ನು ವಾಸ್ತವಿಕತೆಯ ಚಿತ್ರಣದತ್ತ ಗಮನ ಹರಿಸಿ ತಿಳಿದುಕೊಂಡರೆ, ಇವತ್ತಿನ ಪ್ರಮಾಣದಲ್ಲಿ ಸಂಭವಿಸುತ್ತಿರುವ ಆತ್ಮಹತ್ಯೆಗಳು ಗಣನೀಯವಾಗಿ ಕಡಿಮೆಯಾಗುತ್ತವೆ. ನಗರ ಪ್ರದೇಶ, ಗ್ರಾಮೀಣ ಪ್ರದೇಶ, ಹದಿಹರೆಯದವರು, ಮಕ್ಕಳು, ವಯಸ್ಸಾದವರು ಎಂಬ ಭೇದ- ಭಾವವಿಲ್ಲದೇ ಆತ್ಮಹತ್ಯೆಗಳತ್ತ ಮನಸ್ಸು ಮಾಡುವ ಮನಸ್ಸುಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಗಾಯವಾದ ನಂತರದ ಬುದ್ಧಿವಾದ ಸಾವಿನ ನಂತರ ಔಷಧಿ ನೀಡಿದಂತೆ ಎಂಬ ಮಾತನ್ನು ಅರ್ಥೈಸಿಕೊಂಡು ನೈತಿಕ ಶಿಕ್ಷಣ, ಜೀವನದ ಮೌಲ್ಯಗಳು, ಸಾಕಷ್ಟು ಶಿಕ್ಷಣ, ಆರ್ಥಿಕ ಸ್ವಾವಲಂಬನೆ ಒದಗಿಸಿದರೆ ಬದುಕು ಕುಣಿಕೆಗೆ ಕೊರಳು ಕೊಡುವುದನ್ನು ತಪ್ಪಿಸಬಹುದಲ್ಲವೇ?

# ನ.19ರಂದು ಡಾ.ಬಿದರಿ ಚೈಲ್ಡ್ ಅಕಾಡೆಮಿ ಲೋಕಾರ್ಪಣೆ




**ಉದಯರಶ್ಮಿ ನ್ಯೂಸ**

ವಿಜಯಪುರ: ನಗರದ ಚಿಕ್ಕಮಕ್ಕಳ ತಜ್ಞ ಡಾ. ಎಲ್.ಎಚ್.ಬಿದರಿಯವರ 40 ವರ್ಷಗಳ ವೈದ್ಯಕೀಯ ಸೇವೆಯ ಗರಿಯಲ್ಲಿ ಇನ್ನೊಂದು ಗರಿ ಸೇರ್ಪಡೆಯಾಗಲಿದ್ದು, ಎಚ್.ಟಿ.ಬಿದರಿ ಮೆಮೋರಿಯಲ್ ಟ್ರಸ್ಟ್ ಆಶ್ರಯದಲ್ಲಿ "ಡಾ.ಬಿದರಿ ಚೈಲ್ಡ್ ಅಕಾಡೆಮಿ"ಯು ಇದೇ ರವಿವಾರ ನವ್ಹೆಂಬರ್ 19ರಂದು ಸಂಜೆ 5 ಗಂಟೆಗೆ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಲೋಕಾರ್ಪಣೆಯಾಗಲಿದೆ.

ನಾಗಠಾಣ ಮತಕ್ಷೇತ್ರದ ಶಾಸಕ ವಿಠ್ಠಲ ಕಟಕಧೋಂಡ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದು, ಮುದ್ದೇಬಿಹಾಳ ಮತಕ್ಷೇತ್ರದ ಶಾಸಕ ಅಪ್ಪಾಜಿ ನಾಡಗೌಡ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿ.ಪಂ. ಸಿ.ಇ.ಓ.ರಾಹುಲ್ ಶಿಂಧೆ, ಮಕ್ಕಳ ಹಕ್ಕುಗಳ ವಿಶ್ವ ರಾಯಭಾರಿ ಶ್ರೀಮತಿ ವನಿತಾ ತೊರವಿ ಆಗಮಿಸಲಿದ್ದಾರೆ. ಈ ವೇದಿಕೆಯ ಕುರಿತು ಹೆಚ್ಚಿನ ಮಾಹಿತಿ ನೀಡಿದ ಡಾ|| ಎಲ್.ಎಚ್.ಬಿದರಿಯವರು ಮುಂಬರುವ ದಿನಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗಾಗಿ ನಿಯಮಿತವಾಗಿ ಆರೋಗ್ಯ ತಪಾಸಣಾ ಶಿಬಿರಗಳು, ಮಕ್ಕಳಲ್ಲಿ ಹುದುಗಿರುವ ಕಲೆಗಳನ್ನು ಗುರುತಿಸಲು ರಸಪ್ರಶ್ನೆಗಳು, ಚಿತ್ರಕಲೆ, ಪೇಂಟಿಂಗ್, ರಂಗೋಲಿ, ಪ್ರಬಂಧಗಳು, ನೃತ್ಯ, ಗಾಯನ, ಸಾಮಾನ್ಯ ಜ್ಞಾನ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸುವುದು, ಅಲ್ಲದೆ ಪ್ರೇರಣೆ ನೀಡುವ ಮಾತುಗಳು, ಭಾಷಣ ಕಲೆ, ವಾತಾವರಣದ ಅರಿವು ಮೂಡಿಸುವುದು, ಹದಿಹರೆಯದ ಸಮಸ್ಯೆಗಳು, ಆತ್ಮಹತ್ಯೆ ಪ್ರವೃತ್ತಿಗಳು, ಪರೀಕ್ಷೆಯ ಭಯ, ವೈಫಲ್ಯತೆಗಳು, ನಾಯಕತ್ವ ಗುಣಗಳು ಇದಲ್ಲದೆ ಬೇಸಿಗೆ ರಜೆಯಲ್ಲಿ ಟೆನಿಸ್, ಈಜು, ಚೆಸ್ ಮುಂತಾದ ಆಟಗಳ ತರಬೇತಿ, ಹೆಚ್ಚು ಅಂಕಗಳಿಸಿದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಆರೋಗ್ಯವಂತ ಶಿಶುಗಳ ಬೆಳವಣಿಗೆ ಬಗ್ಗೆ ಅರಿವು ಮೂಡಿಸುವುದು, ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳನ್ನು ದತ್ತು ತೆಗೆದುಕೊಳ್ಳುವಿಕೆ, ವಿಜಯಪುರ ನಗರದ ಸರ್ಕಾರಿ ಶಾಲೆ ನಂ. 5ನ್ನು ದತ್ತು ತೆಗೆದುಕೊಳ್ಳುವುದು, ವಿದ್ಯಾರ್ಥಿ ವೇತನ ನೀಡುವುದು ಹೀಗೆ ಮುಂತಾದ ಯೋಜನೆಗಳನ್ನು ಹಾಕಿಕೊಂಡಿದ್ದು, ಇದರಡಿಯಲ್ಲಿ ಈಗಾಗಲೇ ಅನೇಕ ಕಾರ್ಯಕ್ರಮಗಳು ಪ್ರಾರಂಭವಾಗಿದ್ದು ಮೊದಲ ಹಂತದಲ್ಲಿ 8 ರಿಂದ 16 ವರ್ಷದ ಮಕ್ಕಳಿಗಾಗಿ "ಲಿಟಲ್ ಸಿಂಗಿಂಗ್ ಸ್ಟಾರ್ಸ್" ಗಾಯನ ಸ್ಪರ್ಧೆಯಲ್ಲಿ ಸುಮಾರು 180 ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿರುತ್ತಾರೆ ಹಾಗೂ ಅದರಲ್ಲಿ ಫಿನಾಲೇ ಸುತ್ತಿನಲ್ಲಿ 16 ಮಕ್ಕಳು ತಮ್ಮ ಗಾನಪ್ರತಿಭೆಯನ್ನು ಪ್ರದರ್ಶಿಸಲಿದ್ದಾರೆ. ಖ್ಯಾತ ಚಲನಚಿತ್ರ ಹಿನ್ನೆಲೆ ಗಾಯಕಿ ಜೋಗಿ ಸುನಿತಾ ಅವರು ನಿರ್ಣಾಯಕರಾಗಿ ಆಗಮಿಸಲಿದ್ದಾರೆ. ಅದೇ ರೀತಿ "ಆರ್ಟಬೀಟ್ ಚಿತ್ರಕಲಾ ಸ್ಪರ್ಧೆ"ಯಲ್ಲಿ ಸುಮಾರು 200 ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಈ ಸ್ಪರ್ಧೆಯಲ್ಲಿ ಭಾಗವಹಿಸಿದ ಮಕ್ಕಳ ಆಯ್ದ ಅತ್ಯುತ್ತಮ ಚಿತ್ರಗಳನ್ನು ಕಂದಗಲ್ ಹನುಮಂತರಾಯ ರಂಗಮಂದಿರದ ಆವರಣದಲ್ಲಿ ಪ್ರದರ್ಶಿಸಲಾಗುವುದು. ಈ ಕಲಾಕೃತಿಗಳನ್ನು ಸಾರ್ವಜನಿಕರು ಗೌರವಧನ ನೀಡಿ ಖರೀದಿಸಬಹುದಾಗಿದೆ.

ಇದಲ್ಲದೆ "ಮಕ್ಕಳಲ್ಲಿ ನೈತಿಕ ಮೌಲ್ಯಗಳು" ಕುರಿತು ವಿಶೇಷ ಪ್ರಬಂಧ ಸ್ಪರ್ಧೆಯಲ್ಲಿ ಹೈಸ್ಕೂಲ್ ವಿಭಾಗ ಸುಮಾರು 125 ಮಕ್ಕಳು ಭಾಗವಹಿಸಿ ತಮ್ಮ ಭಾಷಾಜ್ಞಾನವನ್ನು ಹಂಚಿಕೊಂಡಿರುತ್ತಾರೆ. ಇದಲ್ಲದೆ ಬಿ.ಪಿ.ಎಲ್. ಕಾರ್ಡಧಾರಕರಿಗಾಗಿ "ಆರೋಗ್ಯವಂತ ಶಿಶುಗಳ ಸ್ಪರ್ಧೆ" ಕೂಡ ಹಮ್ಮಿಕೊಂಡಿದ್ದು ವಿಶೇಷವಾಗಿದೆ. ಈ ಎಲ್ಲಾ ಸ್ಪರ್ಧೆಗಳ ವಿಜೇತರಿಗೆ ಅತ್ಯಾಕರ್ಷಕ ನಗದು ಬಹುಮಾನ, ಪಾರಿತೋಷಕ ಹಾಗೂ ಭಾಗವಹಿಸಿದ ಎಲ್ಲಾ ಮಕ್ಕಳಿಗೆ ರವಿವಾರ ಸಂಜೆ 5 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು. ಈ ಅರ್ಥಪೂರ್ಣ ಕಾರ್ಯಕ್ರಮಕ್ಕೆ ಪ್ರವೇಶ ಸಂಪೂರ್ಣ ಉಚಿತವಾಗಿದ್ದು, ಜಿಲ್ಲೆಯ ಮಕ್ಕಳು, ಪಾಲಕರು ಹಾಗೂ ಸಾರ್ವಜನಿಕರು ಆಗಮಿಸಬೇಕೆಂದು ಡಾ|| ಎಲ್.ಎಚ್.ಬಿದರಿಯವರು ವಿನಂತಿಸಿದ್ದಾರೆ.

# ದೇವಸ್ಥಾನದ ಜೀರ್ಣೋದ್ಧಾರಕ್ಕೆ ಬದ್ಧ :ಸಚಿವ ಶಿವಾನಂದ




**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಭಾರತ ವೈಜ್ಞಾನಿಕವಾಗಿ ಎಷ್ಟೇ ಮುಂದುವರೆದರೂ ದೇವರ ಮೇಲಿನ ಪ್ರೀತಿ ಕಡಿಮೆ ಆಗಿಲ್ಲ ಎಂದು ಜವಳಿ.ಸಕ್ಕರೆ. ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಪಟ್ಟಣದ ಲಕ್ಷ್ಮೀ ನಗರದ ಕ್ವಾಟಿ ಲಕ್ಷ್ಮೀ ದೇವಿಯ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡ ಪ್ರವಚನ ಕಾರ್ಯಕ್ರಮವನ್ನ ಉದ್ಘಾಟಿಸಿ ಮಾತನಾಡಿದ ಅವರು, ಅಷ್ಟ ಲಕ್ಷ್ಮೀಯರನ್ನು ಪೂಜಿಸುವ ಪರಂಪರೆ ಹೊಂದಿರುವ ದೇಶ ನಮ್ಮದು, ಅಪಾರ ಭಕ್ತರನ್ನ ಹೊಂದಿರುವ ಕ್ವಾಟಿ ಲಕ್ಷ್ಮೀ ದೇವಿಯ ಜಾತ್ರೆಯು ಪ್ರತಿ ವರ್ಷ ಅದ್ದೂರಿಯಾಗಿ ಜರಗುತ್ತಿರುವದು ಸಂತೋಷದ ಸಂಗತಿಯಾಗಿದೆ. ಅಲ್ಲದೇ ಕ್ವಾಟಿ ಲಕ್ಷ್ಮೀ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಹಗಲಿರುಳು ಎನ್ನದೆ ಶ್ರಮಿಸುತ್ತಿರುವ ಪರಶುರಾಮ ಅಡಗಿಮನಿ ಅವರು ಸರ್ಕಾರದಿಂದ ಅನುದಾನ ಕಲ್ಪಿಸುವಂತೆ ಬೇಡಿಕೆ ಇಟ್ಟಿದ್ದಾರೆ ಸರ್ಕಾರ ಅನುದಾನ ನೀಡಲಿ ನೀಡದೆ ಇರಲಿ ನಾನು ನಿಮಗೆ ಕೊಟ್ಟ ಭರವಸೆಯಂತೆ ದೇವಸ್ಥಾನವನ್ನ ಜೀರ್ಣೋದ್ಧಾರ ಮಾಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ ಪ್ರವಚನ ಪುರಾಣಗಳಿಂದ ಮಾತ್ರ ಪರಿವರ್ತನೆ ಸಾಧ್ಯ, ಪ್ರತಿಯೊಬ್ಬರು ಪುರಾಣ ಪ್ರವಚನಗಳಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಜೀವನ ಪಾವನ ಮಾಡಿಕೊಳ್ಳಬೇಕು ಎಂದರು.

ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ, ವಿಜಯಪುರ ಅದ್ವೈತ ಆಶ್ರಮದ ಸಂಗಮೇಶ ಶರಣರು. ಪಿಕೆಪಿ–ಎಸ್ ಬ್ಯಾಂಕ್ ಅಧ್ಯಕ್ಷ ಸಂಗನಗೌಡ ಚಿಕ್ಕೊಂಡ. ಮುಖಂಡ ರವಿ ಚಿಕ್ಕೊಂಡ ಮಾತನಾಡಿದರು. ಪುರಸಭೆ ಸದಸ್ಯ ರವಿ ಪಡಶೆಟ್ಟಿ. ಪಂಚಮಸಾಲಿ ಮುಖಂಡ ಮಲ್ಲನಗೌಡ ಪಾಟೀಲ. ರುಕ್ಮಿಣಿಯ ರಾಠೋಡ ಜಾತ್ರ ಉತ್ಸವ ಸಮಿತಿ ಅಧ್ಯಕ್ಷ ಗಣಪತಿ ಬಡಿಗೇರ ಪರಶುರಾಮ ಅಡಗಿಮನಿ ವೇದಿಕೆಯಲ್ಲಿದ್ದರು.

# ಸ್ಪರ್ಧಿಸುವ ಗುಣ ಬೆಳಸಿಕೊಳ್ಳಿ :ಡಾ.ಹೊಸಮನಿ




**ಉದಯರಶ್ಮಿ ನ್ಯೂಸ್**

ಬಸವನ ಬಾಗೇವಾಡಿ: ವಿದ್ಯಾರ್ಥಿಗಳು ಸ್ಪರ್ಧಿಸುವ ಗುಣ ಬೆಳಸಿಕೊಳ್ಳಬೇಕು, ಸೋಲು, ಗೆಲುವು ಏನೇ ಇರಲಿ ಸ್ಪರ್ಧಿಸುವ ಮನೋಭಾವನೆ ಮುಖ್ಯ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್.ಬಿಹೊಸಮನಿ ಹೇಳಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮತದಾರರ ಸಾಕ್ಷರತಾ ಸಂಘದ ಅಡಿಯಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಮತದಾರರ ದಿನಾಚರಣೆಯ ಅಂಗವಾಗಿ 2023–24ನೇ ಸಾಲಿನ ತಾಲೂಕು ಮಟ್ಟದ ವಿವಿಧ ಸ್ಪರ್ಧೆಗಳು ಮಹಾವಿದ್ಯಾಲಯದಲ್ಲಿ ನಡೆದವು.

ಪ್ರಬಂಧ ಸ್ಪರ್ಧೆ, ಬಿತ್ತಿಚಿತ್ರ ಸ್ಪರ್ಧೆ ಮತ್ತು ರಸಪ್ರಶ್ನೆ ಸ್ಪರ್ಧೆಗಳು ಜರುಗಿದವು. ಈ ಸ್ಪರ್ಧೆಗಳಲ್ಲಿ ತಾಲೂಕಿನ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸ್ಪರ್ಧೆಗಳ ನಂತರ ಫಲಿತಾಂಶ ಪ್ರಕಟಣೆ ಮಾಡುತ್ತಾ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪ್ರಾಂಶುಪಾಲರು ಮಾತನಾಡಿದರು. ಈ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಭಾಗವಹಿಸಲು ಅರ್ಹರಾಗುವರು. ಈ ಕಾರ್ಯಕ್ರಮದ ನೋಡಲ್ ಅಧಿಕಾರಿಯಾದ ಡಾ. ಎಚ್. ಎಂ ನಾಟಿಕಾರ ಅವರು ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು.

ಡಾ ಯುವರಾಜ ಮಾದನಶೆಟ್ಟಿ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಡಾ. ಪ್ರಶಾಂತ ನಾಯಕ ಟಿ ಆರ್, ಡಾ ಬಸೀರಾಬಾನು ನಿಡಗುಂದಿ, ಡಾ ಶ್ರೀದೇವಿ ಜತ್ತಿ, ಶ್ರೀಮತಿ ವಿಜಯಲಕ್ಷ್ಮೀ, ಮಮದಾಪುರ, ಮಹಾದೇವಪ್ಪ ವಡ್ಡೊಡಗಿ ಉಪಸ್ಥಿತರಿದ್ದರು.

## ಹೆಸ್ಕಾಂ: ಕುಂದುಕೊರತೆ ಸಭೆ ಇಂದು

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ದಿ: 18 ರಂದು ಶನಿವಾರ(ಇಂದು) ಬೆಳಿಗ್ಗೆ 10 ಘಂಟೆಗೆ ದೇವರಹಿಪ್ಪರಗಿ ಇಂಡಿ ರಸ್ತೆಯಲ್ಲಿಯ ಹೆಸ್ಕಾಂ ಉಪವಿಭಾಗೀಯ ಕಚೇರಿಯಲ್ಲಿ ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ ಹಮ್ಮಿಕೊಳ್ಳಲಾಗಿದೆ.

ತಾಲ್ಲೂಕಿನ ಎಲ್ಲಾ ಗ್ರಾಹಕರು ಸಭೆಗೆ ಆಗಮಿಸಿ ತಮ್ಮ ಕುಂದುಕೊರತೆಗಳನ್ನು ವ್ಯಕ್ತಪಡಿಸಿ ಪರಿಹಾರ ಕಂಡುಕೊಳ್ಳಬೇಕೆಂದು ಕಾರ್ಯ ಮತ್ತು ಪಾಲನೆ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ಕಾವ್ಯರಶ್ಮಿ

– ರೂಪಶ್ರೀ ಎಂ
("ನಮ್ಮ ಕಥಾ ಅರಮನೆ" ಬರಹಗಾರರು)



### ಒಲವ ಮಳೆ

ದೊರೆ ನೀನು ಧರೆ ನಾನು
ದೂರಿ ದೂರಾಗದಿರು ನೀ

ಮುಗಿಲಿಗೆ ಹೇಳುವೆ ಮೆತ್ತಗೆ
ಹೋಗಿ ಮುಗಿಲೇ 'ಅವನೆಡೆಗೆ

ಸುರಿ ಒಂದಿಷ್ಟು ಮಳೆಯನಲ್ಲಿ
ನನ್ನವನ ಎದೆಯ ನೆಲದಲಿ


ಬತ್ತಿಯೇ ಹೋಗಿದೆ ನೋಡಲ್ಲಿ
ಅವನೆದೆಯ ಪ್ರೀತಿಯ ಸೆಲೆ !

ಉದಯರಶ್ಮಿ ದಿನಪತ್ರಿಕೆ



# ಹುಲ್ಲಾಗು ಬೆಟ್ಟದಡಿ...

## ಭಾವರಶ್ಮಿ



– ವಿಜಯಲಕ್ಷ್ಮಿ ಮೂರ್ತಿ
("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

ನಮ್ಮ ಕಥಾ ನಾಯಕಿ ಬೆಳಗ್ಗಿನ ತನ್ನ ಪಾಲಿನ ಎಲ್ಲಾ ಕೆಲಸ ಮುಗಿಸಿ ಸ್ಕೂಟರ್ ಕೀ ಹಿಡಿದು ಹೊರಗೆ ಬಂದಾಗ ಮುಂದಿದ್ದ ಹೆಜ್ಜೆಯನ್ನು ಯಾರೋ ತಡೆದ ಹಾಗೆ ಆಯಿತು. ಮಲ್ಲಿಗೆ ಗಿಡ.. ಅಕ್ಕಾ!ನೀರು ಹಾಕೇ ಇಲ್ಲ ಹಾಗೇ ಹೋಗುತ್ತಿದ್ದೀಯಾ? ಅಂದ ಹಾಗೆ ಗಿಡ ಅವಳ ಕೈಯನ್ನು ಸವರಿತು.

ಅಯ್ಯೋ! ಕೆಲಸದ ಗಡಿಬಿಡಿಯಲ್ಲಿ ಗಿಡಗಳಿಗೆ ನೀರು ಹಾಕುವುದೇ ಮರೆತು ಹೋಯಿತು... ಪರವಾಗಿಲ್ಲ.. ನೀರು ಹಾಕೇ ಹೋಗೋಣ ಅಂತ ಅಲ್ಲೇ ಇದ್ದ ಬಕೆಟ್ ನಲ್ಲಿ ನೀರು ತುಂಬಿ ಗಿಡಗಳಿಗೆ ಹಾಕಿ ಅವುಗಳನ್ನು ನೇವರಿಸಿದಳು... ಗಿಡಗಳು ಖುಷಿಯಾಗಿ ತಲೆ ಅಲ್ಲಾಡಿಸುವಂತೆ ಕಾಣಿಸಿ ತಾನೂ ಖುಷಿಯಾದಳು.

ನಮ್ಮ ಕಥಾನಾಯಕಿ ಸ್ಕೂಟರ್ ಸ್ಟಾರ್ಟ್ ಮಾಡಿದವಳು ಸಾವಿತ್ರಮ್ಮನ ಮನೆ ಮುಂದೆ ನಿಲ್ಲಿಸಿದಳು..ಇವಳ ಸ್ಕೂಟರ್ ಶಬ್ದ ಕೇಳಿ ಸಾವಿತ್ರಮ್ಮ ಕೋಣೆಯಿಂದಲೇ ಇಲ್ಲಿ ಇದ್ದೀನಿ ಮಗಳೇ ... ಎಂದು ಕೂಗಿ ಹೇಳಿದರು..ಅವರ ನಗು ಮುಖ ನೋಡಿ ಮನಸ್ಸು ತುಂಬಿ ಬಂತು. ಅವರ ತೊಡೆಯ ಮೇಲೆ ಮಲಗಿ ಅಮ್ಮನ ಪ್ರೀತಿ ಪಡೆಯುವ ಅನ್ನಿಸಿತು ನಮ್ಮ ಹುಡುಗಿಗೆ..ಸಾವಿತ್ರಮ್ಮನಿಗೆ ಬಿಸಿನೀರು... ಬ್ರಷ್ ಕೊಟ್ಟು ಹಲ್ಲು ಉಜ್ಜಲು ಸಹಾಯ ಮಾಡಿ... ಬಿಸಿ ನೀರಿನಲ್ಲಿ ಮೈ ಒರಸಿ ಒಗೆದ ಬಟ್ಟೆ ಹಾಕಿದಳು...

ಕನ್ನಡಿಯಲ್ಲಿ ತಮ್ಮ ಮುಖ ನೋಡಿದ ಸಾವಿತ್ರಮ್ಮ ನಿಟ್ಟುಸಿರು ಬಿಟ್ಟರು... ಹಳೆ ಸಾವಿತ್ರಿ ಮುಖ ಕನ್ನಡಿಯಲ್ಲಿ ಹುಡುಕಿದರೂ ಸಿಗುವುದಿಲ್ಲ. ಮಲಗಿದ್ದಲ್ಲೇ ಎಲ್ಲಾ ಕೆಲಸ ಮಾಡಿಸಿಕೊಳ್ಳುತ್ತಿರುವ ತಮ್ಮ ದೇಹವನ್ನು ನೋಡಿ ಅವರ ಮನಸ್ಸಿಗೆ ಬಹಳ ಕಷ್ಟವಾಗುತ್ತಿದೆ... ಈ ಕಾಯಿಲೆಯಿಂದ ಮನಸ್ಸು... ದೇಹ ಎರಡೂ ಸೊರಗಿದೆ... ಯಾವ ಕಾಯಿಲೆ? ಅಂದರೆ ಯಜಮಾನರು ಮುಚ್ಚಿಡುತ್ತಾರೆ... ಆದರೆ ಈ ಮುದ್ದಾದ ಹುಡುಗಿ ಮನೆಗೆ ಬಂದಳೆಂದರೆ ಸಾವಿತ್ರಮ್ಮ ಮಲಗಿದ್ದಲ್ಲೇ ಚುರುಕಾಗಿ ಬಿಡುತ್ತಾರೆ.

ಬಿಸಿಯಾದ ಇಡ್ಲಿ ಚಟ್ನಿ ತಂದು ತಿನ್ನಿಸಿದಳು... ನಾನೇ ತಿನ್ನುವೆ ಎಂದರೂ ಈ ಹುಡುಗಿ ಬಿಡುವುದಿಲ್ಲ. ಯಾವ ಜನ್ಮದ ಋಣವೇನೋ ನನಗೂ ಇವಳನ್ನು ನೋಡಿದರೆ ದೂರದ ದೇಶದಲ್ಲಿ ಇರುವ ಮಗಳನ್ನು ನೋಡಿದ ಹಾಗೆ ಆಗುತ್ತೆ ಎಂದುಕೊಂಡರು ಸಾವಿತ್ರಮ್ಮ.

ಎಲ್ಲಾ ಸರಿ ಇದಿಯಾ ನೋಡಿ ಆಂಟಿ... ನಾನು ಗಿರಿಜ ಚಿಕ್ಕಿಯ ಮನೆಗೆ ಹೋಗಿ ಬರುವೆ... ನೀವು ಸ್ವಲ್ಪ ವಿಶ್ರಾಂತಿ ಪಡೆಯರಿ ಎಂದ ಹುಡುಗಿಯನ್ನು ನೋಡಿ ನಸು ನಕ್ಕರು.

ಅಲ್ಲಿಂದ ನಮ್ಮ ಕಥಾ ನಾಯಕಿ ಗಿರಿಜ ಚಿಕ್ಕಿ ಮನೆಗೆ ಹೊರಟಳು... ಇವಳ ಸ್ಕೂಟರ್ ಶಬ್ದ ಕೇಳಿ ಗಿರಿಜ ಕಿಟಕಿಯಿಂದ ನೋಡಿದರು..ಆಗ ಇವಳಿಗೆ ಕಾಣಿಸುತ್ತಿತ್ತು. ಬಂದೆ ಚಿಕ್ಕಿ , ಸ್ವಲ್ಪ ತಡವಾಯಿತು.. ಎಂದು ತಡವಾಗಿದ್ದ ಕಾರಣ ತಿಳಿಸುತ್ತಾ ಒಳ ಬಂದವಳಿಗೆ ಚಿಕ್ಕಿ ನಸು ನಗುವಿನಿಂದ ಅವಳನ್ನು ಬರ ಮಾಡಿಕೊಂಡು ಬಿಸಿ ಕಾಫಿ ತಂದಿದ್ದು ನೋಡಿ ಮನಸ್ಸು ಭಾರವಾಯಿತು ನಮ್ಮ ಕಥಾ ನಾಯಕಿಗೆ.



ತಾನೇ ಸ್ನಾನ ಮಾಡಿ ಶುಭ್ರವಾಗಿ ರೇಷ್ಮೆ ಸೀರೆ ಉಟ್ಟು.. ಮುಖದಲ್ಲಿ ಎದ್ದು ಕಾಣುವ ಅರಿಸಿನದ ಮಧ್ಯೆ ಮಿನುಗುವ ಕುಂಕುಮ ಅವರ ಮುಖದ ಅಂದ ಹೆಚ್ಚಿಸಿದ್ದು

ಹುಟ್ಟಿದ ಕ್ಷಣದಲ್ಲಿ ಅಮ್ಮನನ್ನು ಕಳೆದುಕೊಂಡು.. ಹುಟ್ಟಿಸಿದ ಅಪ್ಪನ ವಿಳಾಸ ಗೊತ್ತಿಲ್ಲದೇ ನಮ್ಮ ಹುಡುಗಿಯನ್ನು ಆಸ್ಪತ್ರೆಯಿಂದ ಕದ್ದು ಮುಚ್ಚಿ ತಂದು ಸೂರ್ಯ ಉದಯಿಸುವ ಮೊದಲೇ ಅನಾಥ ಆಶ್ರಮದ ಬಾಗಿಲ ತೊಟ್ಟಿಯಲ್ಲಿ ಮಲಗಿಸಿ ಗಂಟೆ ಬಾರಿಸಿದ್ದು ಆ ಆಸ್ಪತ್ರೆಯ ದಯಾಮಾಯಿ ನರ್ಸ್... ಮುಂದೆ ಆಶ್ರಮದ ವ್ಯವಸ್ಥೆ ನೋಡಿಕೊಳ್ಳುವ ಮಾಯಿ ಗಂಟೆಯ ಶಬ್ದಕ್ಕೆ ಹೊರಗೆ ಬಂದು ನೋಡಿದಾಗ ಬೆಚ್ಚಗೆ ಮಲಗಿದ ಕಂದನನ್ನು ನೋಡಿ ಅದರ ಸೌಂದರ್ಯಕ್ಕೆ ಮರುಳಾಗಿ

ಅಲ್ಲಿಯೇ ಅವಳಿಗೆ ' ಮೊಗ್ಗ 'ಎಂದು ನಾಮಕರಣ ಮಾಡಿದರು.

ಆ ಮೊಗ್ಗ ಈಗ ದೊಡ್ಡವಳಾಗಿ ಮಾಯಿಯ ಆದೇಶದಂತೆ ನರ್ಸ್ ಟ್ರೈನಿಂಗ್ ಮಾಡಿ ಆಶ್ರಮದ ಆಸ್ಪತ್ರೆಯಲ್ಲಿ ಸಂಜೆ ಕೆಲಸ ಮಾಡುತ್ತಾಳೆ. ಸಹಾಯ ಬೇಕಾದವರಿಗೆ ತನ್ನ ಹಸ್ತದಿಂದ ಸಹಾಯ ಮಾಡುತ್ತಾ ಎಲ್ಲರಿಗೂ ಬೇಕಾದವಳು ಆಗಿದ್ದಾಳೆ. ತಾನು ಪ್ರೀತಿ ಕೊಟ್ಟು ಎಲ್ಲರ ಪ್ರೀತಿಗಳಿಸುತ್ತಿದ್ದಾಳೆ ನಮ್ಮ ಮೊಗ್ಗ. ಶ್ರೀಮಂತ ಗಿರಿಜ ಚಿಕ್ಕಿಗೆ ಮಕ್ಕಳಿಲ್ಲ.. ಹಾಗಾಗಿ ಮಾಯಿ ಹತ್ತಿರ ಮೊಗ್ಗೆಯನ್ನು ದತ್ತು ತೆಗೆದುಕೊಳ್ಳಬೇಕು ಎಂದು ಕೇಳಬೇಕು ಅಂದುಕೊಂಡಿದ್ದಾರೆ. ಯಾವ ವಿಚಾರವು ತನಗೆ ಸಂಬಂಧಿಸಿಲ್ಲ.... ನೋವಲ್ಲಿ ಇರುವವರಿಗೆ ತನ್ನ ಸಹಾಯ ಮುಖ್ಯ ಎಂದು ಮೊಗ್ಗ ಮನಸಿಟ್ಟು ಕೆಲಸ ಮಾಡುತ್ತಾಳೆ.

ಕಾಫಿ ಕುಡಿದ ಮೊಗ್ಗ ಗಿರಿಜ ಚಿಕ್ಕಿಯ ತಲೆಗೆ ಕೊಬ್ಬರಿ ಎಣ್ಣೆ ಹಚ್ಚಿ ಚೆನ್ನಾಗಿ ಬಾಚಿ ಜಡೆ



ಹಣೆದು ತಾನು ತಂದ ಗುಲಾಬಿ ಮುಡಿಸಿ ಮೆಚ್ಚುಗೆಯಿಂದ ಅವರನ್ನು ನೋಡುತ್ತಾಳೆ...ಗಿರಿಜ ಚಿಕ್ಕಿಯು ಕೂದಲು ದಟ್ಟವಾಗಿ ಇದ್ದು ಅವರ ಸೌಂದರ್ಯಕ್ಕೆ ಮೆರಗು ಕೊಟ್ಟಿದೆ...ಪಾಪದ ಚಿಕ್ಕಿ ಮನೆ ಕೆಲಸ ಮಾಡಲು ಯಾವ ತೊಂದರೆ ಇಲ್ಲ.. ಆದರೆ ಕಾರಲ್ಲಿ ತಮ್ಮ ಊರಿಗೆ ಹೋಗುವಾಗ ಅಪಘಾತ ಆಗಿ ಅವರ ಕೈ ಮೂಳೆ ಮುರಿದು ಆಪರೇಷನ್ ಆದ ಮೇಲೆ ಕೈ ಎತ್ತಿ ತಲೆ ಬಾಚಿಕೊಳ್ಳಲು ಆಗದೆ ಒದ್ದಾಡುತ್ತಿದ್ದ ಹೆಂಡತಿಯನ್ನು ನೋಡಿ ಅವರ ಗಂಡ ಮಾಯಿಯ ಸಹಾಯವನ್ನು ಕೇಳಿದರು.. ಹೀಗೆ ಮೊಗ್ಗ ಅವರ ಮನೆಗೆ ಬರುವ ಹಾಗೆ ಆಯಿತು.

ಗಿರಿಜ ಚಿಕ್ಕಿಯ ಒತ್ತಾಯಕ್ಕೆ ತಿಂಡಿ ತಿಂದು ತಾನು ಬೀದಿ ಕೊನೆಯ ಮನೆಯ ಮನೆಗೆ ಹೋಗಿ ಬರುವೆ.. ಎಂದು ಹೇಳಿ ಹೊರಟಳು ನಮ್ಮ ಮೊಗ್ಗ.. ಕೊನೆಯ ಮನೆಯಲ್ಲಿರುವ ಶಾಂತ ಅತ್ತೆಗೆ ವಯಸ್ಸಾಗಿದೆ.... ಕಾಲಲ್ಲಿ ಶಕ್ತಿ ಕಮ್ಮಿಯಾಗಿದೆ.. ಕೆಲಸ ಮಾಡಲು ಹುಮ್ಮಸ್ಸಿಲ್ಲ. ಯಾವಾಗಲೂ ಮಂಚದ ಮೇಲೆ ಮಲಗಿ ಕಾಲ ಕಳೆಯುತ್ತಾರೆ...ಮೈ ಕೈ ನೋವು ಎಂದು ಹೇಳುತ್ತಾ ದಿನ ಕಳೆಯುತ್ತಾರೆ... ಇವರ ಮೊಮ್ಮಗಳು ಅಜ್ಜಿಯು ನರಳುವುದನ್ನು ನೋಡಿ, ಆಶ್ರಮಕ್ಕೆ ಬಂದು ಮಾಯಿಯ ಹತ್ತಿರ ಮೊಗ್ಗೆಯನ್ನು ತಮ್ಮ ಮನೆಗೆ ಅಜ್ಜಿಗೆ ಮಸಾಜ್ ಮಾಡಲು ಕಳಿಸುವಿರಾ? ಎಂದು ಕೇಳಿದ್ದಳು... ಆ ಊರಲ್ಲಿ ಮೊಗ್ಗ ಮಸಾಜ್ ಮಾಡಿದಳೆಂದರೆ ಬೇಗ ಹುಶಾರಾಗುತ್ತಾರೆ ಎಂದು ಮನೆ ಮಾತು ಆಗಿತ್ತು.

ನಮ್ಮ ಮೊಗ್ಗ ಎಲ್ಲದಕ್ಕೂ ಸಿದ್ಧ... ಜೀವನದಲ್ಲಿ ಎಲ್ಲವನ್ನೂ ಸ್ವೀಕರಿಸುತ್ತಾ ಆನಂದದಿಂದ ಪ್ರತಿಯೊಬ್ಬರ ದುಃಖವನ್ನು ಹೋಗಲಾಡಿಸಲು ಶ್ರಮ ಪಡುತ್ತಾಳೆ.. ಸಂತೋಷದ ಮೂಲ.. ಒಳ್ಳೆಯ ಕಾರ್ಯ ಎನ್ನುವುದು ಮೊಗ್ಗ ಮಾಯಿಯವರಿಂದ ಕಲಿತಿದ್ದಾಳೆ. ಎಲ್ಲೇ ಇದ್ದರೂ ನನ್ನನ್ನು ನಂಬಿದವರಿಗೆ ನಾನು ಮೋಸ ಮಾಡುವುದಿಲ್ಲ ಅನ್ನುವ ವಿವೇಕ ಮೊಗ್ಗೆಯಲ್ಲಿ ಇದೆ. ಈ ಮೊಗ್ಗೆಯ ನಡೆ ನುಡಿಯು ಮಾಯಿಗೆ ಅಚ್ಚು ಮೆಚ್ಚು. ಮುಂದಿನ ಮೊಗ್ಗೆಯ ಜೀವನ ದೇವರ ಇಚ್ಛೆ.